# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಜುಲೈ 23, 2021

ಸಂಪುಟ : 48 ಸಂಚಿಕೆ : 70 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


# ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ: ಸಂಪುಟ ಅಸ್ತು

## ಕೇಂದ್ರದ ಉದ್ಯೋಗ-ಶೈಕ್ಷಣಿಕ ಮೀಸಲಾತಿಗೆ ರಾಜ್ಯ ಸಂಪುಟದ ಒಪ್ಪಿಗೆ

ಬೆಂಗಳೂರು, ಜು. 22 -ಯಾವುದೇ ಮೀಸಲಾತಿ ಪಡೆಯದ ಆರ್ಥಿಕವಾಗಿ ಹಿಂದುಳಿದ ಸಮುದಾಯದವರು ಕೇಂದ್ರ ಸರ್ಕಾರದ ನೇಮಕಾತಿ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿ ಪಡೆಯಲು ರಾಜ್ಯ ಸಂಪುಟ ಅನುಮೋದನೆ ನೀಡಿದೆ.

ಸಂಪುಟ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ಪಡೆಯದವರಿಗೆ ಆರ್ಥಿಕವಾಗಿ ಹಿಂದುಳಿದ ಮೀಸಲಾತಿ ಸೌಲಭ್ಯ ಸಿಗಲಿದೆ. ವಾರ್ಷಿಕ 8 ಲಕ್ಷ ರೂ.ಗಳಿಗಿಂತ ಕಡಿಮೆ ಆದಾಯ ಹೊಂದಿದವರು ಈ ಮೀಸಲಾತಿ ಪಡೆಯಲಿದ್ದಾರೆ ಎಂದು ತಿಳಿಸಿದ್ದಾರೆ.

**800 ಕೋಟಿ ರೂ. ವೆಚ್ಚದಲ್ಲಿ 5 ಲಕ್ಷ ಮನೆಗಳ ನಿರ್ಮಾಣಕ್ಕೆ ನಿರ್ಧಾರ**

ಕೇಂದ್ರ ಸರ್ಕಾರ ಈಗಾಗಲೇ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರ ಮೀಸಲಾತಿ ಕಲ್ಪಿಸಿ ಆದೇಶ ಹೊರಡಿಸಿತ್ತು. ರಾಜ್ಯ ಸರ್ಕಾರವೂ ಈಗ ಅನುಮೋದನೆ ನೀಡಿರುವುದರಿಂದ ರಾಜ್ಯದ ಆರ್ಥಿಕವಾಗಿ ಹಿಂದುಳಿದವರು ಮೀಸಲಾತಿ ಪಡೆಯಲು ಸಾಧ್ಯವಾಗಲಿದೆ.

ಬಸವ, ಅಂಬೇಡ್ಕರ್, ದೇವರಾಜ ಅರಸು ವಸತಿ ಯೋಜನೆಯಲ್ಲಿ ರಾಜ್ಯದ ಗ್ರಾಮೀಣ ಭಾಗದಲ್ಲಿ 4 ಲಕ್ಷ ಹಾಗೂ ನಗರ ಪ್ರದೇಶದಲ್ಲಿ ಅಂಬೇಡ್ಕರ್ ಮತ್ತು ವಾಜಪೇಯಿ ಆಶ್ರಯ ಯೋಜನೆಯಡಿ 1 ಲಕ್ಷ ಸೇರಿದಂತೆ ಮುಂದಿನ ಎರಡು ವರ್ಷಗಳಲ್ಲಿ 5 ಲಕ್ಷ ಮನೆ ನಿರ್ಮಿಸಲಾಗುವುದು. ಇದಕ್ಕೆ 800 ಕೋಟಿ ರೂ. ವೆಚ್ಚವಾಗಲಿದೆ ಎದರು.

ರಾಜ್ಯದ ಏಳು ಪ್ರಮುಖ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಹೆಕ್ಸಾಗನ್ ಮ್ಯಾನುಫ್ಯಾಕ್ಚರಿಂಗ್ ಇಂಟೆಲಿಜೆನ್ಸ್ ಇಂಡಿಯಾ ಕಂಪನಿ ಹಾಗೂ ರಾಜ್ಯ ಸರ್ಕಾರಗಳ ಆಶ್ರಯದಲ್ಲಿ 110 ಕೋಟಿ ರೂ. ವೆಚ್ಚದಲ್ಲಿ ಆವಿಷ್ಕಾರ ಹಾಗೂ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದವರು ಹೇಳಿದರು.

ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸಲು ಮುಂದಿನ ಐದು ವರ್ಷಗಳಲ್ಲಿ **(2ನೇ ಪುಟಕ್ಕೆ)**

# ಸೋಮವಾರ ರಾಜೀನಾಮೆಗೆ ಸಿಎಂ ಇಂಗಿತ

ಬೆಂಗಳೂರು, ಜು. 22 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜುಲೈ 26 ರ ಸೋಮವಾರದಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವ ಇಂಗಿತ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿ 26ರ ಬೆಳಿಗ್ಗೆ 11 ಗಂಟೆಗೆ ರಾಜ್ಯಪಾಲರ ಸಮಯ ಪಡೆದುಕೊಂಡಿರುವುದು ಗಮನಾರ್ಹವಾಗಿದೆ.



**ಪಕ್ಷದ ಸಂಘಟನೆಯಲ್ಲಿ ತೊಡಗಿಕೊಳ್ಳುವುದಾಗಿ ಯಡಿಯೂರಪ್ಪ ಹೇಳಿಕೆ**

ರಾಜ್ಯಪಾಲರ ಸಮಯ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ, ಪಕ್ಷದ ವರಿಷ್ಠರ ತೀರ್ಮಾನಕ್ಕೆ ತಾವು ಬದ್ಧರಾಗಿದ್ದು, ಅವರು ಹೇಳಿದಂತೆ ನಡೆದುಕೊಳ್ಳುತ್ತೇನೆ ಎನ್ನುವ ಮೂಲಕ ಮೊದಲ ಬಾರಿಗೆ ಸ್ಥಾನ ತೊರೆಯುವುದನ್ನು ಸೂಚ್ಯವಾಗಿ ತಿಳಿಸಿದರು.

ಜು. 25 ರಂದು ವರಿಷ್ಠರಿಂದ ಸೂಚನೆ ಬರಲಿದೆ. ಅವರು ಯಾವ ಸಂದೇಶ ನೀಡುತ್ತಾರೋ, ಅದನ್ನು ನಾನು ಗೌರವಯುತವಾಗಿ ಪಾಲಿಸುತ್ತೇನೆ. ಜುಲೈ 26 ರಿಂದಲೇ ಪಕ್ಷ ಸಂಘಟನೆಗೆ ತಮ್ಮನ್ನು ತೊಡಗಿಸಿಕೊಳ್ಳುತ್ತೇನೆ ಎನ್ನುವ ಮೂಲಕ ಅಧಿಕಾರದಿಂದ ಕೆಳಗಿಳಿಯುವುದನ್ನು ಪರೋಕ್ಷವಾಗಿ ತಿಳಿಸಿದರು. ಜುಲೈ 26ಕ್ಕೆ **(2ನೇ ಪುಟಕ್ಕೆ)**

# ಭದ್ರಾ ನಾಲೆಗಳಿಗೆ ನೀರು: ವಾರದ ಮಟ್ಟಿಗೆ ಮುಂದೂಡುವ ಸಾಧ್ಯತೆ

ಶಿವಮೊಗ್ಗ, ಜು. 22 - ಭದ್ರಾ ಅಚ್ಚುಕಟ್ಟು ಸೇರಿದಂತೆ ಎಲ್ಲಾ ಕಡೆ ಕಳೆದ ನಾಲ್ಕೈದು ದಿನಗಳಿಂದ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಭದ್ರಾ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸುವ ದಿನಾಂಕವನ್ನು ವಾರದ ಮಟ್ಟಿಗೆ ಮುಂದೂಡುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.



ಈ ಕುರಿತು ಭದ್ರಾ ಅಧೀಕ್ಷಕ ಅಭಿಯಂತರ ಚಂದ್ರಹಾಸ್ ಅವರೊಂದಿಗೆ ಮೌಖಿಕವಾಗಿ ಚರ್ಚಿಸಿರುವ ಪವಿತ್ರಾ ರಾಮಯ್ಯ ಅವರು, ಈ ಹಿಂದೆ ಭದ್ರಾ ಕಾಡಾ ಸಭೆಯಲ್ಲಿ ಜುಲೈ 23ರ ಮಧ್ಯರಾತ್ರಿ ಕಾಲುವೆಗೆ ನೀರು ಹರಿಸಲು ನಿರ್ಧರಿಸಲಾಗಿತ್ತು. ಆದರೆ ಈಗ ಎಲ್ಲಾ ಕಡೆ ಉತ್ತಮ ಮಳೆಯಾಗುತ್ತಿರುವುದರಿಂದ ಅಚ್ಚುಕಟ್ಟಿನ ರೈತರು ಸಹ ಸದ್ಯ ಕಾಲುವೆಗಳಿಗೆ ನೀರು ಹರಿಸುವುದು ಬೇಡ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿರುವುದರಿಂದ 23ರ ಬದಲಿಗೆ ಜು.28ರ ನಂತರ ನೀರು ಹರಿಸುವ ಬಗ್ಗೆ ಸೂಚಿಸಿದ್ದಾರೆಂದು ತಿಳಿದು ಬಂದಿದೆ.







# ನವೆಂಬರ್‌ನಲ್ಲಿ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನ



ಹೊನ್ನಾಳಿ, ಜು.22- ಕೊರೊನಾ ಕಾರಣ ದಿಂದ ಪತ್ರಕರ್ತರ ರಾಜ್ಯಮಟ್ಟದ ಸಮ್ಮೇಳನ ಮುಂದೂಡಲಾಗಿದ್ದು, ನವೆಂಬರ್ ತಿಂಗಳಲ್ಲಿ ಕಲ್ಬುರ್ಗಿಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್ ತಿಳಿಸಿದ್ದಾರೆ.

ಇಲ್ಲಿನ ಪತ್ರಿಕಾ ಭವನದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ತಾಲ್ಲೂಕಿನ ಪತ್ರಕರ್ತರನ್ನು ಇನ್ನು ಮುಂದೆ ಅರೆಕಾಲಿಕ ಸುದ್ದಿಗಾರರು ಎಂದು ನಾವು ಕರೆಯುವುದಿಲ್ಲ. ಅವರನ್ನು ಪೂರ್ಣಾವಧಿ ಪತ್ರಕರ್ತರು ಎಂದೇ ಕರೆಯುವಂತೆ ತಿದ್ದುಪಡಿ ಮಾಡಲಾಗಿದೆ. ಏಕೆಂದರೆ ಅವರು ಸುದ್ದಿಗಾಗಿ ಕೇವಲ ಒಂದೆರಡು ಗಂಟೆ ಮಾತ್ರ ಕೆಲಸ ಮಾಡುವುದಿಲ್ಲ. ದಿನವಿಡೀ ಸುದ್ದಿಗಾಗಿ ಕೆಲಸ ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಎಂದು ಹೇಳಿದರು.

ಹತ್ತಾರು ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿರುವ ಗ್ರಾಮೀಣ ಪತ್ರಕರ್ತರಿಗೆ ಜಿಲ್ಲಾ ಮಟ್ಟದಲ್ಲಿ ಉಚಿತ ಬಸ್ ಪಾಸ್ ನೀಡುವ ವಿಷಯ ಕುರಿತು ಮುಖ್ಯಮಂತ್ರಿಗಳೊಂದಿಗೆ ಮಾತುಕತೆ ನಡೆಸಲಾಗಿದೆ. ಆದರೆ ಕೆಲವೊಂದು ಐಎಎಸ್ ಅಧಿಕಾರಿಗಳ ಚಿತಾವಣೆಯಿಂದ ಇದು ಸಾಧ್ಯವಾಗಿರಲಿಲ್ಲ. ಶೀಘ್ರದಲ್ಲಿಯೇ ಇದು ನೆರವೇರಲಿದೆ ಎಂದರು. ಹಾಗೆಯೇ ಆಯುಷ್ಮಾನ್ ಆರೋಗ್ಯ ಹೆಲ್ತ್ ಕಾರ್ಡ್ ಕೂಡಾ ಪತ್ರಕರ್ತರಿಗೆ ಕೊಡುವ ಬಗ್ಗೆ ಚರ್ಚೆ ನಡೆದಿದೆ. ಅದಕ್ಕಾಗಿ ಸರ್ಕಾರ ಅನುದಾನ ಮೀಸಲಿಡಬೇಕು ಎಂದರು.

ರಾಜ್ಯ ಹಾಗೂ ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ಸರ್ಕಾರದಿಂದ ಬರಬೇಕಾಗಿದ್ದ 56 ಕೋಟಿ ರೂಪಾಯಿ ಜಾಹೀರಾತು ಮೊತ್ತವನ್ನು ಸಂಘದ ಹೋರಾಟದ ಫಲವಾಗಿ ಬಿಡುಗಡೆ ಮಾಡಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಸಂಘದಿಂದ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, ಬೆಂಗಳೂರು ನಗರ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ದೇವರಾಜ್, ಸದಸ್ಯರಾದ ಲಕ್ಷ್ಮೀಪತಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಸಂಘದ ಅಧ್ಯಕ್ಷ ಮೃತ್ಯುಂಜಯ ಪಾಟೀಲ್ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೋರಿ ಯೋಗೀಶ್ ಸ್ವಾಗತಿಸಿದರು. ಟಿ. ಶ್ರೀನಿವಾಸ್ ನಿರೂಪಿಸಿದರು. ಪತ್ರಕರ್ತರಾದ ಆಂಜನೇಯ, ಜಯಪ್ಪ, ಮಲ್ಲೇಶ್, ಷಣ್ಮುಖಯ್ಯ ಇದ್ದರು.

# ಜಗಳೂರು : ಕೂಲಿ ಕಾರ್ಮಿಕರ ಹಣ ಸಾಲಕ್ಕೆ ಜಮಾ ಖಂಡಿಸಿ ಪ್ರತಿಭಟನೆ



ಜಗಳೂರು, ಜು.22- ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿಯ ಕೂಲಿ ಕಾರ್ಮಿಕರ ಹಣವನ್ನು ಬ್ಯಾಂಕ್ ಸಾಲಕ್ಕೆ ಜಮಾ ಮಾಡಿಕೊಳ್ಳದಂತೆ ಒತ್ತಾಯಿಸಿ ಗ್ರಾಕೂಸ್ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ಆವರಣದಲ್ಲಿ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ ನೇತೃತ್ವದಲ್ಲಿ ಮನರೇಗಾ ಕೂಲಿ ಕಾರ್ಮಿಕರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು.

ನಂತರ ಮಾತನಾಡಿದ ತಾಲ್ಲೂಕು ಅಧ್ಯಕ್ಷರಾದ ಸುಧಾ ಪಲ್ಲಾಗಟ್ಟೆ, ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿಕಾರರು ಕೆಲ ದಿನಗಳಿಂದ ಕೆಲಸ ಮಾಡಿದ್ದಾರೆ. ಕೂಲಿ ಕಾರ್ಮಿಕರ ಖಾತೆಗೆ ಜಮಾ ಆಗಿರುವ ನರೇಗಾ ಅನುದಾನದ ಹಣವನ್ನು ಸಾಲಕ್ಕೆ ಪಡೆಯುವಂತಿಲ್ಲ ಎಂಬ ಸರ್ಕಾರದ ಆದೇಶವಿದ್ದರೂ ಉಲ್ಲಂಘಿಸಿ, ಕೂಲಿಕಾರರ ಪರವಾನಿಗೆ ಸಹಿಯಿಲ್ಲದೆ ಬ್ಯಾಂಕ್ ಸಿಬ್ಬಂದಿಗಳು ಸಾಲಕ್ಕೆ ಜಮಾ ಮಾಡಿಕೊಳ್ಳುತ್ತಿರುವುದು ಖಂಡನೀಯ ಎಂದು ಬೇಸರ ವ್ಯಕ್ತಪಡಿಸಿದರು.

ತಾಲ್ಲೂಕಿನ ದಿದ್ದಿಗಿ, ಪಲ್ಲಾಗಟ್ಟೆ, ಬಸವನಕೋಟೆ, ಬಿಸ್ತುವಳ್ಳಿ, ಹನುಮಂತಾಪುರ ಸೇರಿದಂತೆ ಹಲವು ಗ್ರಾಮ ಪಂಚಾಯ್ತಿಗಳಲ್ಲಿ ಬ್ಯಾಂಕ್‌ಸಾಲ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಇನ್ನು ದೊಣ್ಣೆಹಳ್ಳಿ ಗ್ರಾ.ಪಂ.ನಲ್ಲಿ ಚಾರ್ಜಿಂಗ್ ಚಾಟ್ ನೀಡುತ್ತಿಲ್ಲ. ಹನುಮಂತಾಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕೆಲಸ ನೀಡುತ್ತಿಲ್ಲ. ಕೆಲವೆಡೆ ಜಾಬ್ ಕಾರ್ಡ್ ಒದಗಿಸಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಘಟನೆಯ ಪದಾಧಿಕಾರಿಗಳಾದ ನಾಗರತ್ನ, ಕೃಷ್ಣ, ಸಮಾದಪ್ಪ, ರಾಘವೇಂದ್ರ, ಮಂಜಮ್ಮ, ಸುಶೀಲ, ರೇಣುಕಮ್ಮ, ದ್ಯಾಮಕ್ಕ, ನಾಗರಾಜ್, ಅಂಜಿನಪ್ಪ, ಶಿವಣ್ಣ, ಪರಮೇಶ್ವರಪ್ಪ, ಬಸವರಾಜ್, ಶಿವಕುಮಾರ್ ಇನ್ನಿತರರು ಭಾಗವಹಿಸಿದ್ದರು.

# ದಾವಣಗೆರೆ ವಿವಿಗೆ ವಿದ್ಯಾರ್ಥಿ ಸಂಘಟನೆಗಳ ನಿಯೋಗ



ದಾವಣಗೆರೆ, ಜು.22 - ಬೆಸ ಸೆಮಿಸ್ಟರ್ ಪರೀಕ್ಷೆಗಳನ್ನು ರದ್ದುಗೊಳಿಸಿ, ಅಂತಿಮ ಸೆಮಿಸ್ಟರ್‌ನ ಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿ ದಾವಣಗೆರೆ ವಿಶ್ವವಿದ್ಯಾಲಯದ ಉಪಕಲಪತಿ ಪ್ರೊ. ಶರಣಪ್ಪ ಹಲಸೆ ಅವರ ಬಳಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ಜಿಲ್ಲಾ ಸಮಿತಿಯು ಹಾಗೂ ವಿದ್ಯಾರ್ಥಿಗಳ ಹೋರಾಟ ಸಮಿತಿಯ ಸಾಮೂಹಿಕ ನಿಯೋಗ ಇಂದು ತೆರಳಿತ್ತು.

ಇದೇ ದಿನಾಂಕ 26ರಿಂದ ಪ್ರಾರಂಭವಾಗಬೇಕಿದ್ದ ಪರೀಕ್ಷೆಗಳನ್ನು ತಾತ್ಕಾಲಿಕವಾಗಿ ಮುಂದೂಡಲಾಗುವುದು ಎಂದು ದೂರವಾಣಿ ಮೂಲಕ ಉಪಕುಲಪತಿಗಳು ವಿದ್ಯಾರ್ಥಿಗಳಿಗೆ ಭರವಸೆ ನೀಡಿದರು. ಅಲ್ಲದೆ ನಾಳೆ ವಿದ್ಯಾರ್ಥಿಗಳೊಂದಿಗೆ ಚರ್ಚೆ ನಡೆಸಿದ ನಂತರ ಪರೀಕ್ಷೆಗಳ ಬಗ್ಗೆ ವಿದ್ಯಾರ್ಥಿ ಪರ ನಿರ್ಧಾರ ತೆಗೆದುಕೊಳ್ಳುವೆವು ಎಂದು ಭರವಸೆ ನೀಡಿದ್ದಾರೆ. ಉಪಕುಲಪತಿಗಳ ನಿರ್ದೇಶನದ ಆಧಾರದ ಮೇಲೆ ಕುಲಸಚಿವರು ಅದನ್ನು ಲಿಖಿತವಾಗಿ ನೀಡಿದ್ದಾರೆ ಎಂದು ಎಐಡಿಎಸ್ ಓ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ತಿಳಿಸಿದ್ದಾರೆ.

# ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಿಗೆ ಡಿಡಿಪಿಐ ರಾಮಪ್ಪ ಭೇಟಿ



ಕೂಡ್ಲಿಗಿ

ಕೂಡ್ಲಿಗಿ, ಜು.22- ಇಂದು ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಬಳ್ಳಾರಿ ಉಪನಿರ್ದೇಶಕ ಸಿ. ರಾಮಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಾನಾಮಡುಗು ಗ್ರಾಮದ ಶ್ರೀ ಶರಣ ಬಸವೇಶ್ವರ ಪ್ರೌಢಶಾಲೆಯ ಪರೀಕ್ಷಾ ಕೇಂದ್ರಕ್ಕೆ ಡಿಡಿಪಿಐ ರಾಮಪ್ಪ ಅವರು ಮೊದಲು ಭೇಟಿ ನೀಡಿದರು. ಅಲ್ಲಿಂದ ಹೊಸಹಳ್ಳಿ, ಚಿಕ್ಕಜೋಗಿಹಳ್ಳಿಯ ಕೇಂದ್ರಗಳಿಗೂ ಆಗಮಿಸಿ, ನಂತರ ಕೂಡ್ಲಿಗಿಯ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿದರು.

ಬಿಇಓ ಉಮಾದೇವಿ ಅವರು ಚಿಕ್ಕಜೋಗಿಹಳ್ಳಿಯ ಬಾಲಕರ ಸರ್ಕಾರಿ ಪ್ರೌಢಶಾಲೆ, ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಪರೀಕ್ಷಾ ಕೇಂದ್ರ, ಹೊಸಹಳ್ಳಿ, ಇತರೆಡೆ ಇರುವ ಪರೀಕ್ಷಾ ಕೇಂದ್ರಗಳಿಗೂ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಡಿಡಿಪಿಐ ಕಚೇರಿಯ ಅಧೀಕ್ಷಕ ಅನಂತ್ ಕುಮಾರ್, ಸ್ಥಾನಿಕ ಜಾಗೃತದಳದ ಅಧಿಕಾರಿ ಪಾಲ್ತೂರು ಶಿವರಾಜ್, ಮಾರ್ಗಾಧಿಕಾರಿ ಬಿ.ಮಂಜುನಾಥ, ಬೊಮ್ಮಯ್ಯ, ಬಿಆರ್‌ಪಿ ತಳವಾರ ಶರಣಪ್ಪ, ಚಿಕ್ಕಜೋಗಿಹಳ್ಳಿ ಪರೀಕ್ಷಾ ಕೇಂದ್ರದ ಜಾಗೃತ ದಳದ ಕರಿಬಸಪ್ಪ, ಬಸೆಟ್ಟೆಪ್ಪ, ಕೇಂದ್ರದ ಮುಖ್ಯಸ್ಥ ಶೇಖರಪ್ಪ, ಬಸವರಾಜಪ್ಪ ಸೇರಿದಂತೆ ಇತರರಿದ್ದರು.

# ರಾಜೀನಾಮೆ ನೀಡುವುದಿಲ್ಲ ಎಂದ ವಲಸೆ ಸಚಿವರು

ಬೆಂಗಳೂರು, ಜು.22 – ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜೀನಾಮೆ ನೀಡಿದರೆ ತಾವೂ ಸಹ ರಾಜೀನಾಮೆ ನೀಡುವುದಾಗಿ ಹರಡಿರುವ ವರದಿಗಳನ್ನು ಕಾಂಗ್ರೆಸ್ - ಜೆಡಿಎಸ್‌ನಿಂದ ವಲಸೆ ಬಂದ ಸಚಿವರು ತಳ್ಳಿ ಹಾಕಿದ್ದಾರೆ. ನಾಯಕತ್ವಕ್ಕೆ ಸಂಬಂಧಿಸಿದಂತೆ ಹೈಕಮಾಂಡ್ ನಿಲುವಿಗೆ ಬದ್ಧವಾಗಿರುವುದಾಗಿ ಅವರು ಹೇಳಿದ್ದಾರೆ.

2019ರಲ್ಲಿ ಎರಡೂ ಪಕ್ಷಗಳಿಂದ ವಲಸೆ ಬಂದವರಲ್ಲಿ 12 ಜನ ಸಚಿವರಾಗಿದ್ದಾರೆ. ಇವರ ಪೈಕಿ ಕನಿಷ್ಠ ಆರು ಸಚಿವರು ಸಂಪುಟ ಸಭೆಯ ನಂತರ ಮುಖ್ಯಮಂತ್ರಿಯನ್ನು ಭೇಟಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಕೆಲವರು ಕೈಯಲ್ಲಿ ಚೀಟಿಗಳನ್ನು ಹಿಡಿದುಕೊಂಡಿದ್ದರು. ಈ ಸಚಿವರು ರಾಜೀ ನಾಮೆ ನೀಡಲಿದ್ದಾರೆ ಎಂಬ ಮಾತುಗಳೂ ಕೇಳಿ ಬಂದಿದ್ದವು. ಯಡಿಯೂರಪ್ಪ ಮುಂದುವರಿಕೆಗಾಗಿ ಇದು ಒತ್ತಡ ತಂತ್ರ ಎಂದೂ ಹೇಳಲಾಗುತ್ತಿತ್ತು.

ಆದರೆ, ಭೇಟಿಯ ನಂತರ ಮಾತನಾಡಿರುವ ಆರೋಗ್ಯ ಸಚಿವ ಕೆ. ಸುಧಾಕರ್, ನಾವೇಕೆ ರಾಜೀನಾಮೆ ನೀಡಬೇಕು? ಯಡಿಯೂರಪ್ಪನವರ ನಾಯಕತ್ವ ಹಾಗೂ ಬಿಜೆಪಿ ತತ್ವ, ಸಿದ್ಧಾಂತ ಒಪ್ಪಿ ಬಂದಿದ್ದೇವೆ. ಪಕ್ಷದ ಹೈಕಮಾಂಡ್ ನಿರ್ಧಾರಕ್ಕೆ ಬದ್ಧವಾಗಿರುತ್ತೇವೆ ಎಂದರು.

ಮುಖ್ಯಮಂತ್ರಿ ಭೇಟಿ ಮಾಡಿರುವ ಇನ್ನೋರ್ವ ಸಚಿವ ಬಿ.ಸಿ. ಪಾಟೀಲ್ ಹೇಳಿಕೆ ನೀಡಿದ್ದು, ನಾವು ರಾಜೀನಾಮೆ ನೀಡುತ್ತೇವೆ ಎಂಬುದು ಆಧಾರ ರಹಿತ. ಯಾರೊಬ್ಬರೂ ರಾಜೀನಾಮೆ ನೀಡಿಲ್ಲ, ಅದರ ಅಗತ್ಯವೂ ಇಲ್ಲ ಎಂದಿದ್ದಾರೆ. ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದರೆ, ನಾನು ಸಚಿವ ಸ್ಥಾನ ಕಳೆದುಕೊಳ್ಳುತ್ತೇನೆ ಎಂಬ ಭೀತಿಯೂ ಇಲ್ಲ ಎಂದವರು ಹೇಳಿದ್ದಾರೆ.

ಇನ್ನೋರ್ವ ಸಚಿವ ಎಂ.ಟಿ.ಬಿ. ನಾಗರಾಜ್ ಹೇಳಿಕೆ ನೀಡಿದ್ದು, ಮಾಧ್ಯಮದ ಕೆಲ ವರ್ಗದವರು ಹೇಳುತ್ತಿರುವಂತೆ ನಾವು ರಾಜೀನಾಮೆ ಪತ್ರಗಳನ್ನು ತೆಗೆದುಕೊಂಡು ಹೋಗಿಲ್ಲ. ಸಂಪುಟದ ಕೆಲ ನಿರ್ಧಾರಗಳ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿದ್ದೇವೆ. ವರ್ಗಾವಣೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ಅನುದಾನದ ಕುರಿತು ಚರ್ಚಿಸಿದ್ದೇವೆ ಎಂದಿದ್ದಾರೆ.

2019ರಲ್ಲಿ ಕಾಂಗ್ರೆಸ್ - ಜೆಡಿಎಸ್‌ನ 17 ಶಾಸಕರು ರಾಜೀನಾಮೆ ನೀಡಿದ್ದರಿಂದ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರ ಪತನಗೊಂಡಿತ್ತು. 16 ಶಾಸಕರು ಬಿಜೆಪಿಗೆ ಸೇರಿದ್ದರು. ಇವರಲ್ಲಿ ಬಹುತೇಕರು ನಂತರ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್‌ನಿಂದ ಗೆದ್ದಿದ್ದರು. ಇವರ ಪೈಕಿ 12 ಜನರು ಸಚಿವರಾಗಿದ್ದಾರೆ.

ಇವರೆಲ್ಲರೂ ಯಡಿಯೂರಪ್ಪ ನಾಯಕತ್ವ ನಂಬಿ ಬಂದವರಾಗಿದ್ದಾರೆ. ಹೀಗಾಗಿ ಯಡಿಯೂರಪ್ಪ ಬದಲಾವಣೆ ವರದಿ ಸಚಿವರಲ್ಲಿ ಕಳವಳ ತಂದಿದೆ. ಭವಿಷ್ಯದ ಬಗ್ಗೆ ಅನಿಶ್ಚಿತತೆ ಉಂಟಾಗಿದೆ ಎಂದು ಮೂಲಗಳು ಹೇಳಿವೆ.

# ಹೆಚ್.ವೈ. ಪ್ರಶಾಂತ್‌ಗೆ ಪಿಹೆಚ್‌ಡಿ



ಜಗಳೂರು, ಜು.22- ಕರ್ನಾಟಕ ವಿಶ್ವವಿದ್ಯಾ ಲಯ ಸ್ನಾತಕೋತ್ತರ ಕೇಂದ್ರ (ಹಾವೇರಿ) ಇದರ ಪ್ರಭಾರಿ ಆಡಳಿತಾಧಿಕಾರಿಗಳು ಮತ್ತು ಸಮಾಜ ಕಾರ್ಯ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಹೆಚ್.ವೈ. ಪ್ರಶಾಂತ್ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯವು ಪಿಹೆಚ್‌ಡಿ ಪದವಿ ನೀಡಿದೆ. ಪ್ರಶಾಂತ್, ಬೆಂಗಳೂರು ವಿವಿ ಯುಜಿಸಿ ಮಹಿಳಾ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಮತ್ತು ನಿರ್ದೇಶಕ ಡಾ. ಸಿ.ಡಿ. ವೆಂಕಟೇಶ್ ಮಾರ್ಗದರ್ಶನದಲ್ಲಿ ಮಂಡಿಸಿದ 'ಲಿಂಗಾಂತರ ಲೈಂಗಿಕ ಅಲ್ಪಸಂಖ್ಯಾತರು: ಒಂದು ಲಿಂಗ ಸಂಬಂಧಿ ಅಧ್ಯಯನ (ಬೆಂಗಳೂರು ನಗರವನ್ನು ಅನುಲಕ್ಷಿಸಿ)' ಪ್ರಬಂಧಕ್ಕೆ ಈ ಪದವಿ ಲಭಿಸಿದೆ. ಪ್ರಶಾಂತ್, ಜಗಳೂರಿನ ಕೆನರಾ ಬ್ಯಾಂಕ್‌ನ ನಿವೃತ್ತ ವಿಭಾಗೀಯ ಪ್ರಬಂಧಕ ಎನ್.ಟಿ. ಎರ್ರಿಸ್ವಾಮಿ ಮತ್ತು ಸಾವಿತ್ರಮ್ಮ ದಂಪತಿ ಪುತ್ರ.

# ಸೋಮವಾರ ರಾಜೀನಾಮೆಗೆ ಸಿಎಂ ಇಂಗಿತ

**(1ನೇ ಪುಟದಿಂದ)** ತಾವು ಮುಖ್ಯಮಂತ್ರಿಯಾಗಿ ಎರಡು ವರ್ಷ ತುಂಬಲಿದೆ. ಸರ್ಕಾರದ ಸಾಧನೆಯ ಬಗ್ಗೆ ವಿಶೇಷ ಕಾರ್ಯಕ್ರಮ ಇಟ್ಟುಕೊಂಡಿದ್ದೇನೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ವರಿಷ್ಠರ ಸೂಚನೆಯನ್ನು ಪಾಲಿಸುತ್ತೇನೆ ಎಂದವರು ಹೇಳಿದ್ದಾರೆ.

ಇಡೀ ರಾಷ್ಟ್ರದಲ್ಲಿ 75 ವರ್ಷ ಮೀರಿದ ಯಾರಿಗೂ ಬಿಜೆಪಿ ಅಧಿಕಾರ ನೀಡಿಲ್ಲ. ತಮ್ಮ ಕಾರ್ಯನಿರ್ವಹಣೆ, ಕೆಲಸಗಳ ಬಗ್ಗೆ ಮೆಚ್ಚುಗೆ ಹೊಂದಿದ್ದ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಇವರೆಲ್ಲ 75 ವರ್ಷ ದಾಟಿದ ತಮ್ಮನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ, ವಿಶೇಷ ಕಾಳಜಿ ತೋರಿಸಿದರು. ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ನನ್ನ ಮುಂದಿನ ನಿರ್ಧಾರದಿಂದ ಗೊಂದಲಕ್ಕೆ ಒಳಗಾಗುವುದು ಬೇಡ. ಪಕ್ಷವನ್ನು ಸದೃಢಗೊಳಿಸಿ, 2023 ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುತ್ತೇನೆ ಎಂದವರು ಹೇಳಿದ್ದಾರೆ.

ಸಂಘಟನೆಗೆ ಎಲ್ಲರೂ ಕೈ ಜೋಡಿಸೋಣ. ನನ್ನ ಪರವಾಗಿ ಹೇಳಿಕೆ, ಪ್ರತಿಭಟನೆ ಮಾಡಬೇಡಿ, ಕಳೆದ ಎರಡು, ಮೂರು ದಿನಗಳಿಂದ ವಿವಿಧ ಸಮುದಾಯದ ಸ್ವಾಮೀಜಿಗಳು, ನನಗೆ ಆಶೀರ್ವಾದ ಮಾಡಿದ್ದಾರೆ. ಇದನ್ನು ನನ್ನ ಜೀವನದಲ್ಲಿ ಮರೆಯಲು ಸಾಧ್ಯವಿಲ್ಲ. ಒಂದು ವಿಶೇಷ ಸನ್ನಿವೇಶ ಇದಾಗಿದೆ. ಈ ಹಿಂದೆ ಯಾರಿಗೂ ಇಂತಹ ಆಶೀರ್ವಾದ ದೊರೆತಿರಲಿಲ್ಲ. ಅವರ ಆಶೀರ್ವಾದಕ್ಕೆ ನಾನು ಋಣಿಯಾಗಿದ್ದೇನೆ ಎಂದರು.

ಮುಖ್ಯಮಂತ್ರಿಯವರು ತಮ್ಮ ಸ್ಥಾನ ತ್ಯಜಿಸುವ ಇಂಗಿತ ವ್ಯಕ್ತಪಡಿಸುತ್ತಿದ್ದಂತೆ ಅವರ ಸಹೋದ್ಯೋಗಿ ಸಚಿವರುಗಳು ವರಿಷ್ಠರ ನಿರ್ಧಾರಕ್ಕೆ ಬದ್ಧ ಎಂದಿದ್ದಾರೆ.

ಸಚಿವರಾದ ಬಸವರಾಜ ಬೊಮ್ಮಾಯಿ, ಆರ್. ಅಶೋಕ್ ಸೇರಿದಂತೆ ಹಲವರು ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಷಯ ನಮಗೆ ತಿಳಿದಿಲ್ಲ. ಯಡಿಯೂರಪ್ಪ ಮತ್ತು ವರಿಷ್ಠರ ನಡುವೆ ನಡೆದ ಮಾತುಕತೆ ಬಗ್ಗೆ ನಮಗೆ ಯಾವುದೇ ಸುಳಿವು ಇಲ್ಲ. ವರಿಷ್ಠರು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾವು ಬದ್ಧನಾಗಿರುತ್ತೇವೆ ಎಂದಿದ್ದಾರೆ.

## ಕ್ರಾಂತಿಯ ಕಿಡಿ ಆಜಾದ್ ಚಂದ್ರಶೇಖರ್



ಬ್ರಿಟಿಷರ ಸೆದೆ ಬಡಿಯಲು ಬಂದ ಬರಸಿಡಿಲು
ಸ್ವಾತಂತ್ರ್ಯಕ್ಕಾಗಿ ನೆತ್ತರು ಹರಿಸಿದ ಧೈರ್ಯದ ಕಡಲು
ಕ್ರಾಂತಿಯ ಕಿಡಿಯಿಂದ ಬೆಳಗಿದ ಮುಗಿಲು
ಪರಕೀಯರ ಎದೆಯಲ್ಲಿ ಬಿತ್ತಿದ ದಿಗಿಲು


ಸ್ವಾತಂತ್ರ್ಯವೇ ಅವನ ನಾಮಧೇಯ
ಭಾರತಾಂಬೆಗೆ ಎಂದಿಗೂ ವಿಧೇಯ
ಕಕೋರಿ ದರೋಡೆ,ಲಾಲಾಲಜಪತ್ ರಾಯ್ ಸಾವಿನ ಹೋರಾಟ
ಇತಿಹಾಸದಲ್ಲಿ ದಾಖಲಾಗಿದೆ ಅಳಿಯದ ಪುಟ

ಸ್ವಾತಂತ್ರ್ಯ ಕ್ಕಾಗಿ ಬ್ರಿಟಿಷರ ವಿರುದ್ಧ ಮೊದಲು ಅಸ್ತ್ರ ಬಳಸಿದ ಆಜಾದ್
ಅವನ ಮೂಲಗುರಿಯೇ ಸ್ವರಾಜ್
ಆಜಾದ್, ಬಲರಾಜ್ , ಹಲವು ವಿಶೇಷಣ
ಪರಕೀಯರಿಗೆ ಸಿಗದೆ ಹೊಂದಿದ ವೀರ ಮರಣ

ನೆನಪಿಸಿಕೊಳ್ಳೋಣ ಅವರ ತ್ಯಾಗ ಬಲಿದಾನ
ಈ ಮಣ್ಣಲ್ಲಿ ಆಗಲಿ ಅಂತ ವೀರ ಪುತ್ರನ ಪುನರ್ಜನನ...

- ಬಸವರಾಜ.ಕರುವಿನ, ಬಸವನಾಳು.


## ಎಸ್.ಎ. ಖಾನ್ (ಅಬ್ದುಲ್) ನಿಧನ



ಜನನ : 16-04-1953

ನಿಧನ : 22-07-2021

ದಾವಣಗೆರೆ ಕುವೆಂಪು ನಗರ ಎಂ.ಸಿ.ಸಿ.'ಬಿ' ಬ್ಲಾಕ್ 20ನೇ ಮೇನ್ ವಾಸಿ

**ಎಸ್.ಎ. ಖಾನ್ (ಅಬ್ದುಲ್)** ಅವರು

ದಿನಾಂಕ 22.07.2021ರ ಗುರುವಾರ ಬೆಳಿಗ್ಗೆ 11 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 67 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 22.07.2021ರ ಗುರುವಾರ ಸಂಜೆ ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗ**
**ಎಸ್. ತಬ್ರೇಜ್‌ಖಾನ್, ಎಸ್. ಸಮೀರ್‌ಖಾನ್**
**ಎಸ್. ಮೋಶಿನ್ ಖಾನ್ ಹಾಗೂ ಬಂಧು-ಮಿತ್ರರು.**


# ಹದಡಿ ಸಮೀಪದಲ್ಲಿ ದೇವಸ್ಥಾನಕ್ಕೆ ಕನ್ನ

ದಾವಣಗೆರೆ, ಜು.22- ದೇವಸ್ಥಾನಕ್ಕೆ ಕನ್ನ ಹಾಕಿರುವ ಕಳ್ಳರು, ಹುಂಡಿಯಲ್ಲಿದ್ದ 2 ಸಾವಿರ ರೂ. ದೋಚಿರುವ ಘಟನೆ ಹದಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ರಾಜುಗಾರ ಕ್ಯಾಂಪ್‌ನಲ್ಲಿರುವ ಶ್ರೀರಾಮ ದೇವಸ್ಥಾನದಲ್ಲಿ ಇದೇ ದಿನಾಂಕ 20ರ ರಾತ್ರಿ ದೇವಸ್ಥಾನದ ಬೀಗ ಮುರಿದು ಹುಂಡಿಯನ್ನು ಕದ್ದೊಯ್ದು ದೇವಸ್ಥಾನದಿಂದ ಒಂದು ಫರ್ಲಾಂಗ್ ದೂರದ ಹೊಲದಲ್ಲಿ ಬಿಟ್ಟು, ಅದರಲ್ಲಿದ್ದ ಹಣವನ್ನು ದೋಚಿದ್ದಾರೆ. ದೇವಸ್ಥಾನದಲ್ಲಿನ ಸಿಸಿ ಕ್ಯಾಮರಾ ಮುರಿದು ಹಾಕಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

# ಹಿಂದುಳಿದವರಿಗೆ ಮೀಸಲಾತಿ

**(1ನೇ ಪುಟದಿಂದ)** 75 ಕೋಟಿ ರೂ. ವೆಚ್ಚ ಮಾಡುವ ಯೋಜನೆಗೆ ಅನುಮತಿ ನೀಡಲಾಗಿದೆ. ಕಂದಾಯ ಇಲಾಖೆಯಲ್ಲಿ ನಿಯೋಜನೆ ಅಥವಾ ಬಡ್ತಿ ಆಧಾರದ ಮೇಲೆ ತಹಶೀಲ್ದಾರರ ನೇಮಕ ತಡೆಯಲು ನಿರ್ಧರಿಸಲಾಗಿದೆ. ತಹಶೀಲ್ದಾರರು ಮ್ಯಾಜಿಸ್ಟ್ರೇಟ್ ಆಗಿ ಕೆಲಸ ಮಾಡುವ ಜೊತೆಗೆ, ಭೂ ದಾಖಲೆ ಪರಿಶೀಲನೆಯಂತಹ ಕೆಲಸಗಳನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ನಿಯೋಜನೆ ಸೂಕ್ತವಲ್ಲ. ಈಗಾಗಲೇ ನಿಯೋಜನೆ ಮೇಲೆ ಬಂದವರನ್ನು ಮಾತೃ ಇಲಾಖೆಗೆ ಕಳಿಸಲಾಗುವುದು.

ರಾಜ್ಯ ಸರ್ಕಾರಿ ನೌಕರರಿಗೆ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೆ ತರಲು ತೀರ್ಮಾನಿಸಲಾಗಿದೆ ಎಂದಿರುವ ಅವರು, ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಗಳ ಖರ್ಚು - ವೆಚ್ಚಗಳ ಮೇಲುಸ್ತುವಾರಿಗೆ ಪ್ರಾಧಿಕಾರ ರಚಿಸಲಾಗುವುದು ಎಂದು ತಿಳಿಸಿದ್ದಾರೆ.

35 ರಿಂದ 45 ಲಕ್ಷ ರೂ.ಗಳ ಒಳಗಿನ ಫ್ಲ್ಯಾಟ್‌ಗಳ ಖರೀದಿಗೆ ವಿಧಿಸುವ ಸ್ಟಾಂಪ್ ಡ್ಯೂಟಿಯನ್ನು ಶೇ.5ರಿಂದ 3ಕ್ಕೆ ಇಳಿಕೆ ಮಾಡಲಾಗುವುದು. ಮಾರ್ಗಸೂಚಿ ಮೌಲ್ಯ ಕಡಿಮೆ ಮಾಡಲು ಸಮಿತಿ ರಚಿಸಲಾಗುವುದು ಎಂದು ಬೊಮ್ಮಾಯಿ ಹೇಳಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಧರ್ಮಪುರ ಕೆರೆ ಸೇರಿದಂತೆ ಸುತ್ತಲಿನ ಏಳು ಕೆರೆಗಳಿಗೆ ವಾಣಿ ವಿಲಾಸ ಸಾಗರದಿಂದ ನೀರು ತುಂಬಿಸುವ 90 ಕೋಟಿ ರೂ.ಗಳ ಯೋಜನೆಗೆ, 40 ಕೋಟಿ ರೂ. ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಶಿವಮೊಗ್ಗದಲ್ಲಿ ಆಯುಷ್ ವಿಶ್ವವಿದ್ಯಾನಿಲಯ ಸ್ಥಾಪನೆಯ ವಿಧೇಯಕಕ್ಕೂ ಸಂಪುಟ ಸಮ್ಮತಿ ನೀಡಿದೆ ಎಂದು ಬೊಮ್ಮಾಯಿ ಹೇಳಿದ್ದಾರೆ.

# ಮಳೆಯಿಂದ ಹಾನಿಯಾದ ಪ್ರದೇಶಗಳಿಗೆ ಡಿಸಿ, ಎಸ್ಪಿ ಭೇಟಿ



ದಾವಣಗೆರೆ,ಜು. 22- ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮದಲ್ಲಿ ಮಳೆಯಿಂದ ಹಾನಿಗೊಳಗಾದ ಸೇತುವೆ ಸೇರಿದಂತೆ ವಿವಿಧ ಪ್ರದೇಶಗಳಿಗೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.


## ಶಿವಮೊಗ್ಗದ ಹೆಚ್.ಎಸ್ ನಾಗರಾಜ್ ನಿಧನ



ದಿ|| ಶಿವಾನಂದ ಹಳಕಟ್ಟಿ ಇವರ ಪುತ್ರರಾದ ಶಿವಮೊಗ್ಗ ನಗರ ವಾಸಿ

**ಶ್ರೀ ಹೆಚ್.ಎಸ್ ನಾಗರಾಜ್** ಇವರು

ದಿನಾಂಕ 22.07.2021ರ ಗುರುವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 49 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.07.2021 ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಶಿವಮೊಗ್ಗ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**
**ಮೊ: 90088 33411, ಗೆಳೆಯರ ಬಳಗ**

## ಸವಿ ನೆನಪು



**ದಿ|| ಶಿವಪ್ರಕಾಶ್ ಡಿ.ಎನ್. (ಶಿವು)**


ನಿಧನ : 23.07.2012

**ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು.**
**ಸದಾ ನಿಮ್ಮ ಸ್ಮರಣೆಯಲ್ಲಿ...**

ತಂದೆ : ✦ ಎಂ.ಎಸ್. ನಾಗರಾಜ್. ತಾಯಿ : ✦ ಶ್ರೀಮತಿ ಕೆ.ಜಿ. ಸೌಭಾಗ್ಯ
✦ ಎಂ.ಎನ್. ಮಯೂರ್ ಶ್ರೀಮತಿ ರತ್ನಮ್ಮ
✦ ಎಂ.ಎನ್. ವಿಜಯ್ ✦ ಎಂ.ಎನ್. ಶ್ರೀನಿಧಿ ✦ ಎಂ.ಎನ್. ರೇವಂತ್
ಮೊಮ್ಮಗ : ✦ ಸಿದ್ಧಾರ್ಥ್ ಹಾಗೂ ದೊಡ್ಡಬಸಪ್ಪ ವಂಶಸ್ಥರು ಬಂಧು-ಬಳಗ, ಮೆಳ್ಳೇಕಟ್ಟೆ
ಚಿಕ್ಕಮ್ಮ : ಶ್ರೀಮತಿ ಅನಸೂಯ ದೇವೇಂದ್ರಪ್ಪ, ಲೋಲಾಕ್ಷಮ್ಮ


ಶ್ರೀ ರೇವಣಸಿದ್ದೇಶ್ವರ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ.
ಶ್ರೀ ರೇವಣಸಿದ್ದೇಶ್ವರ ವಸತಿಯುತ ಪ್ರೌಢಶಾಲೆ ಮತ್ತು
ಶ್ರೀಮತಿ ನಾಗಮ್ಮ ಹಿರಿಯ ಪ್ರಾಥಮಿಕ ಶಾಲೆಯ ಸಿಬ್ಬಂದಿ ವರ್ಗ, ಬಸಾಪುರ.


## ಪ್ರೇಮ. ಟಿ.ಡಿ ನಿಧನ




ದಾವಣಗೆರೆ ನಗರದ ಶಿವಕುಮಾರ ಸ್ವಾಮಿ ಬಡಾವಣೆಯ ನಿವಾಸಿ ನಿವೃತ್ತ ಶಿಕ್ಷಕಿ ಪ್ರೇಮ. ಟಿ.ಡಿ (67) ಅವರು ದಿನಾಂಕ 22.07.2021ರಂದು ಗುರುವಾರ ದೈವಾಧೀನರಾಗಿದ್ದಾರೆ. ಪತಿ, ಪುತ್ರ, ಸೊಸೆ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.07.2021 ರಂದು ಮಧ್ಯಾಹ್ನ 2 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ (ಗ್ಲಾಸ್ ಹೌಸ್) ನೆರವೇರಲಿದೆ.

## ಹಳೇಬಾತಿ ಸುಶೀಲಮ್ಮ ನಿಧನ



ದಾವಣಗೆರೆ ತಾ. ಹಳೇಬಾತಿ ಗ್ರಾಮದ ಸಣ್ಣ ಹನುಮಪ್ಪ ಈಶ್ವರಪ್ಪನವರ ಧರ್ಮಪತ್ನಿ ಶ್ರೀಮತಿ ಸುಶೀಲಮ್ಮ (59) ಅವರು ದಿನಾಂಕ 22.07.2021ರಂದು ಗುರುವಾರ ರಾತ್ರಿ 8 ಗಂಟೆಗೆ ನಿಧನರಾಗಿದ್ದಾರೆ. ಪತಿ, ಮೂವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.07.2021 ರಂದು ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮದಲ್ಲಿ ನೆರವೇರಲಿದೆ.


## 15ನೇ ವರ್ಷದ ಚಿರಸ್ಮರಣೆ



**ದಿ|| ಶ್ರೀಮತಿ ವಸಂತಮ್ಮ ಶೆಟ್ಟಪ್ಪನವರ್**

ನೀವು ನಮ್ಮನ್ನಗಲಿ ಇಂದಿಗೆ (23.07.2020) 15 ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ,

**ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ದಾವಣಗೆರೆ.**


# ಸ.ನೌ.ಸಂಘದಿಂದ ಇಂದು ಲಸಿಕೆ ಅಭಿಯಾನ

ಹರಿಹರ ತಾಲ್ಲೂಕು ಸರ್ಕಾರಿ ನೌಕರರ ಸಂಘದಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಸರ್ಕಾರಿ ನೌಕರರಿಗೆ ಮತ್ತು ಅವರ ಅವಲಂಬಿತ ಕುಟುಂಬ ವರ್ಗದವರಿಗೆ ಕೋವಿಡ್ ಲಸಿಕೆ ಕಾರ್ಯಕ್ರಮವನ್ನು ಗುರುಭವನದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ತಿಳಿಸಿದ್ದಾರೆ.

# ದೇವನಗರಿಯಲ್ಲಿ ಸಿನಿಮಾ ಪ್ರಿಯರಿಗೆ ನಿರಾಸೆ

## ಪೂರ್ತಿ ಸೀಟು ಭರ್ತಿಗೆ ಅವಕಾಶ ಕೊಟ್ಟರಷ್ಟೇ ಸಿನಿಮಾ ಪ್ರದರ್ಶನ

ದಾವಣಗೆರೆ, ಜು.22- ಹೊಸ ಸಿನಿಮಾಗಳು ಬಿಡುಗಡೆಯಾಗದಿರುವುದು, ಶೇ.50ರಷ್ಟು ಸೀಟುಗಳ ಭರ್ತಿಗೆ ಸರ್ಕಾರ ಅವಕಾಶ ನೀಡಿರುವುದು, ಮಳೆಗಾಲ ಮುಂತಾದ ಕಾರಣಗಳಿಂದಾಗಿ ಸದ್ಯ ದೇವನಗರಿಯಲ್ಲಿ ಚಿತ್ರಗಳ ಪ್ರದರ್ಶನಕ್ಕೆ ಥಿಯೇಟರ್ ಮಾಲೀಕರು ಉತ್ಸಾಹ ತೋರುತ್ತಿಲ್ಲ. ಪರಿಣಾಮ ನಗರದ ಬಹುತೇಕ ಚಿತ್ರಮಂದಿರಗಳ ದ್ವಾರದಲ್ಲಿ 'ಬೀಗ'ದ ಪ್ರದರ್ಶನವೇ ಮುಂದುವರೆಯಲಿದೆ.

ಕೊರೊನಾ ಸೋಂಕು ಇಳಿಕೆಯಾದ ಹಿನ್ನೆಲೆಯಲ್ಲಿ ಸರ್ಕಾರವು ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಿ ಸಿನಿಮಾ ಥಿಯೇಟರ್‌ಗಳನ್ನು ತೆರೆಯಲು ಅವಕಾಶ ನೀಡಿತ್ತು. ಕಳೆದ ಮೂರ್ನಾಲ್ಕು ತಿಂಗಳುಗಳಿಂದ ಬಂದ್ ಆಗಿದ್ದ ಚಿತ್ರಮಂದಿರಗಳು ಬಾಗಿಲು ತೆರೆಯುವುದನ್ನು ಎದುರು ನೋಡುತ್ತಿದ್ದ ಚಿತ್ರ ರಸಿಕರಿಗೆ ನಿರಾಸೆ ತಪ್ಪಿಲ್ಲ.

ಸರ್ಕಾರವು ಸದ್ಯಕ್ಕೆ ಶೇ.50ರಷ್ಟು ಸೀಟು ಭರ್ತಿಗೆ ಮಾತ್ರ ಅವಕಾಶ ಕೊಟ್ಟು ಥಿಯೇಟರ್‌ಗಳು ಬಾಗಿಲು ತೆರೆಯಲು ಅವಕಾಶ ನೀಡಲಾಗಿದೆ. ಆದರೆ ಈ ನಿಯಮದಿಂದ ನಷ್ಟವೇ ಹೆಚ್ಚು ಎಂದು ಹೇಳುತ್ತಿರುವ ಮಾಲೀಕರು, ಶೇ.100ರಷ್ಟು ಸೀಟು ಭರ್ತಿಗೆ ಅವಕಾಶ ನೀಡಿದರೆ ಮಾತ್ರ ಚಿತ್ರಮಂದಿರ ತೆರೆಯುವುದಾಗಿ ಹೇಳುತ್ತಿದ್ದಾರೆ.

ಇದೇ ಶುಕ್ರವಾರದಿಂದ ಪ್ರದರ್ಶನಕ್ಕೆ ಸಜ್ಜಾಗಬಹುದೆಂಬ ನಿರೀಕ್ಷೆ ಹುಸಿಯಾಗಿದೆ. ಸದ್ಯ ಥಿಯೇಟರ್ ಆರಂಭಿಸಿದರೂ ಹಳೆಯ ಚಿತ್ರಗಳನ್ನೇ ಪ್ರದರ್ಶಿಸಬೇಕಾಗುತ್ತದೆ. ಇದರಿಂದ ಪ್ರೇಕ್ಷಕರ ಸಂಖ್ಯೆಯೂ ಕಡಿಮೆಯಾಗುತ್ತದೆ ಎನ್ನುವುದು ಮಾಲೀಕರ ಅಳಲು.


ಸ್ವಚ್ಛತೆಯಷ್ಟೇ, ಪ್ರದರ್ಶನವಿಲ್ಲ - ನಗರದ ಚಿತ್ರಮಂದಿರದಲ್ಲಿ ಸ್ವಚ್ಛತೆಯಲ್ಲಿ ನಿರತ ಕಾರ್ಮಿಕರು.

**ಈ ತಿಂಗಳು ಕೊನೆ ಅಥವಾ ಆಗಸ್ಟ್ ಮೊದಲ ವಾರ ಆರಂಭಿಸಬಹುದು. ಹೊಸ ಚಿತ್ರಗಳು ಯಾವುದೂ ಇಲ್ಲ. ಸದ್ಯ ಕನ್ನಡ ಚಿತ್ರಗಳ ಬಿಡುಗಡೆ ಬಗ್ಗೆ ಯಾವುದೇ ಮಾಹಿತಿ ಇಲ್ಲ. ತಿಂಗಳಾಂತ್ಯದಲ್ಲಿ 1 ತೆಲುಗು ಹಾಗೂ ಆಗಸ್ಟ್‌ನಲ್ಲಿ ಹಿಂದಿ ಚಿತ್ರಗಳು ಬಿಡುಗಡೆಯಾಗುವ ಸಾಧ್ಯತೆ ಇದೆ. ಹೊಸ ಚಿತ್ರ ಬಿಡುಗಡೆ ನಂತರವೇ ಪ್ರದರ್ಶನ ಆರಂಭವಾಗಲಿದೆ.**

- ಪರಮೇಶ್, ಎಸ್.ಎಸ್. ಮಾಲ್

**ಹೊಸ ಸಿನಿಮಾ ಯಾವುದೂ ಇಲ್ಲ. ಮಳೆ ಬೇರೆ ಇದೆ. ಹಳೆಯ ಚಿತ್ರಗಳು ಮೂರು ಶೋ ಅಷ್ಟೇ ಮಾಡಬೇಕಾಗುತ್ತದೆ. ಪೂರ್ತಿ ಸೀಟು ಭರ್ತಿಗೆ ಅವಕಾಶ ನೀಡಿದರೆ ಥಿಯೇಟರ್ ಆರಂಭಿಸಬಹುದು.**

- ಮಹದೇವಗೌಡ, ಗೀತಾಂಜಲಿ ಥಿಯೇಟರ್ ವ್ಯವಸ್ಥಾಪಕ

ಶೇ.50ರಷ್ಟು ಸೀಟು ಭರ್ತಿ ಕಾರಣಕ್ಕೆ ದೊಡ್ಡ ಸಿನಿಮಾಗಳು ಸದ್ಯಕ್ಕೆ ಬರಲ್ಲ. ಈ ಹೊತ್ತಿನಲ್ಲಿ ಬಾಗಿಲು ತೆರೆದರೆ ಚಿತ್ರಮಂದಿರಗಳ ನಿರ್ವಹಣೆ ಕಷ್ಟ ಆಗಲಿದೆ. ಶೇ.100ರಷ್ಟು ಸೀಟು ಭರ್ತಿಗೆ ಅವಕಾಶ ಕೊಟ್ಟರೆ ಮಾತ್ರ ಸ್ಟಾರ್ ನಟರ ಚಿತ್ರಗಳು ಬಿಡುಗಡೆಯಾಗಬಹುದು ಎನ್ನುತ್ತಾರೆ ಮಾಲೀಕರು.

ಹೊಸ ಚಿತ್ರಗಳಿಲ್ಲದ ಕಾರಣ ತ್ರಿಶೂಲ್-ತ್ರಿನೇತ್ರ ಥಿಯೇಟರ್‌ಗಲ್ಲಿ ಇನ್ನೂ ಒಂದು ವಾರ ಚಿತ್ರ ಪ್ರದರ್ಶನವಿಲ್ಲ ಎಂದು ವ್ಯವಸ್ಥಾಪಕ ಪ್ರಭು ಹೇಳಿದರು. ವಸಂತ ಚಿತ್ರಮಂದಿರದ ವಿರೂಪಾಕ್ಷ ಅವರೂ ಸಹ ಸದ್ಯಕ್ಕೆ ಚಿತ್ರಪ್ರದರ್ಶನ ಇಲ್ಲ ಎಂದಿದ್ದಾರೆ.



ದಿನಪೂರ್ತಿ ಜಿಟಿ ಜಿಟಿ ಬೀಳುತ್ತಿರುವ ಮಳೆಯಲ್ಲಿ ಕೊಡೆಯ ಆಸರೆ ಪಡೆದು ಸ್ನೇಹಿತೆಯರಿಬ್ಬರು ಹೆಜ್ಜೆ ಹಾಕುತ್ತಿರುವುದು.

# ದೈನಿಕ್ ಭಾಸ್ಕರ್, ಸಮಾಚಾರ್ ಟಿವಿಗಳ ಮೇಲೆ ಐ.ಟಿ. ದಾಳಿ

ನವದೆಹಲಿ, ಜು. 22 – ದೈನಿಕ್ ಭಾಸ್ಕರ್ ಪತ್ರಿಕೆ ಹಾಗೂ ಉತ್ತರ ಪ್ರದೇಶದ ಭಾರತ್ ಸಮಾಚಾರ್ ಟಿವಿ ವಾಹಿನಿಗಳು ತೆರಿಗೆ ವಂಚನೆ ಮಾಡಿರುವ ಆರೋಪದ ಮೇಲೆ ಆದಾಯ ತೆರಿಗೆ ಅಧಿಕಾರಿಗಳು ಹಲವೆಡೆ ದಾಳಿ ನಡೆಸಿದ್ದಾರೆ. ಈ ಕ್ರಮವನ್ನು ಹಲವಾರು ರಾಜಕೀಯ ಪಕ್ಷಗಳು ತರಾಟೆಗೆ ತೆಗೆದುಕೊಂಡಿವೆ.

12 ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ದೈನಿಕ್ ಭಾಸ್ಕರ್ ಸಮೂಹದ 30 ತಾಣಗಳ ಮೇಲೆ ದಾಳಿ ನಡೆಸಲಾಗಿದೆ. ಬೆಳಿಗ್ಗೆ 5.30ಕ್ಕೆ ಆರಂಭವಾದ ದಾಳಿ, ಸಂಜೆಯವರೆಗೂ ಮುಂದುವರೆದಿತ್ತು.

ಈ ಸಮೂಹ ಜವಳಿ ಹಾಗೂ ಗಣಿಗಾರಿಕೆ ಉದ್ಯಮಗಳನ್ನೂ ನಡೆಸುತ್ತಿದೆ. ಇಲಾಖೆ ಈ ವಹಿವಾಟುಗಳ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಹಾಗೂ ದೆಹಲಿ (5ನೇ ಪುಟಕ್ಕೆ)

# ಸಿಎಂ ಬದಲಾವಣೆ ಸೂಕ್ತವಲ್ಲ

ದಾವಣಗೆರೆ, ಜು.22- ಕೊರೊನಾ ಸಮಯದಲ್ಲಿ ಸಿಎಂ ಬದಲಾವಣೆ ಸೂಕ್ತವಲ್ಲ. ಈ ಸಮಯದಲ್ಲಿ ಸಿಎಂ ಬದಲಾವಣೆಯಾದರೆ ರಾಜ್ಯಕ್ಕೂ, ಬಿಜೆಪಿ ಪಕ್ಷಕ್ಕೂ ಒಳ್ಳೆಯದಲ್ಲ ಎಂದು ಜಗಳೂರು ಶಾಸಕ ಎಸ್.ವಿ. ರಾಮಚಂದ್ರ ಅಭಿಪ್ರಾಯ ಪಟ್ಟಿದ್ದಾರೆ.



ಅವರು, ಇಂದು ನಗರದಲ್ಲಿನ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕೊರೊನಾದಂತಹ ಸಂದರ್ಭದಲ್ಲಿ ಬಿ.ಎಸ್. ಯಡಿಯೂರಪ್ಪ ಎಲ್ಲರನ್ನೂ ಪ್ರೀತಿ ವಿಶ್ವಾಸದಿಂದ ಕರೆದುಕೊಂಡು ಹೋಗುತ್ತಿದ್ದಾರೆ ಎಂದು ಬಿಎಸ್‌ವೈ ಪರ ಮಾತನಾಡಿದ್ದಾರೆ.

ಸಭೆ ನಂತರ ಸಿಎಂ ಬಳಿ ಮಾತನಾಡುತ್ತೇನೆ. ನಾನು ಯಾವಾಗಲೂ ಸಿಎಂ ಬಿಎಸ್‌ವೈ ಪರವಾಗಿಯೇ ಇರುತ್ತೇನೆ. ಯಾವುದೇ ಮಾಹಿತಿ ಪಡೆಯದೇ ಯಾರೂ ಮಾತನಾಡtಬಾರದು. ಯಡಿಯೂರಪ್ಪ ಅವರು ಸರ್ಕಾರವನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ. ಕಾರಣ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆದರೆ ಒಳ್ಳೆಯದು. ಯಡಿಯೂರಪ್ಪರ (5ನೇ ಪುಟಕ್ಕೆ)

## ಗುರುಪೂರ್ಣಿಮೆ ನಮನ

ಗುರುವೆ ನಿಮಗೆ ವಂದಿಸುವೆ
ಗುರುಪೂರ್ಣಿಮೆ ದಿನದಿ ಪ್ರಾರ್ಥಿಸುವೆ
ಪರಿಪರಿ ಅಜ್ಞಾನ ಓಡಿಸಿ ಎಂದು
ಪರಮಾದರದಲಿ ಯಾಚಿಸುವೆ

ಜ್ಞಾನಾಂದದಿ ಹೊಳೆಯುವಿರಿ
ಮನಕಾನಂದವ ನೀಡುವಿರಿ
ಇನನಂತೆ ಕತ್ತಲ ಕಳೆಯುವಿರಿ
ಜ್ಞಾನದ ಬೆಳಕನು ನೀಡುವಿರಿ

ಕ್ಲಿಷ್ಟ ತತ್ವಗಳ ವಿವರಿಸುತ
ಕಷ್ಟದಿ ಸನ್ಮಾರ್ಗ ತೋರುತ್ತ
ಶಿಷ್ಯರನು ಉದ್ದರಿಸುತ್ತ
ಶ್ರೇಷ್ಠವಾಗಿ ತಿದ್ದಿ ತೀಡುತ್ತ

ಆಧಾರ ನೀಡುವ ಮರವಾಗಿ
ಸದಾ ನಿಂತಿರುವಿರಿ ಸ್ಥಿರವಾಗಿ
ಶಿಷ್ಯ ಬಳ್ಳಿಗಳ ಸಲಹುತ್ತ
ವಿಶೇಷರಾಗಿಹಿರಿ ಪೊರೆಯುತ್ತ

ಪ್ರತ್ಯಕ್ಷ ಪರಮಾತ್ಮರು ನೀವು
ಚಿತ್ತ ಪ್ರೇರಿಸೊ ಶಕ್ತಿಯು ನೀವು
ಸತ್ಯ ಸರಿಹರಿ ಬಿಂಬವೆ ನೀವು
ನಿತ್ಯ ಸಲಹಿ ನಮ್ಮನು ನೀವು

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ಸಿಎಂ ಭರವಸೆ ಸರ್ಕಾರದ ಜವಾಬ್ದಾರಿ

## ಬಾಡಿಗೆ ಪಾವತಿ ಬಗ್ಗೆ ಕೇಜ್ರಿವಾಲ್ ನೀಡಿದ ಭರವಸೆ ಬಗ್ಗೆ ನಿರ್ಧರಿಸಲು ದೆಹಲಿ ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

ನವದೆಹಲಿ, ಜು. 22 – ಮುಖ್ಯಮಂತ್ರಿಯೊಬ್ಬರು ನಾಗರಿಕರಿಗೆ ನೀಡಿದ ಭರವಸೆ ಈಡೇರಿಸಬಹುದಾದದ್ದು ಎಂಬುದು ಸ್ಪಷ್ಟ ಎಂದಿರುವ ದೆಹಲಿ ಹೈಕೋರ್ಟ್, ಕೊರೊನಾ ಸಮಯದಲ್ಲಿ ಮನೆ ಬಾಡಿಗೆ ಪಾವತಿಸಲು ಸಾಧ್ಯವಾಗದವರಿಗೆ ಸರ್ಕಾರ ದಿಂದಲೇ ಬಾಡಿಗೆ ಪಾವತಿಸಲಾಗುವುದು ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೀಡಿರುವ ಭರವಸೆ ಈಡೇರಿಸುವ ಬಗ್ಗೆ ಆಮ್ ಆದ್ಮಿ ಪಾರ್ಟಿ ಸರ್ಕಾರ ನಿರ್ಧಾರ ತೆಗೆದುಕೊಳ್ಳುವಂತೆ ತಿಳಿಸಿದೆ.

ಆರು ವಾರಗಳ ಒಳಗೆ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು. ದೆಹಲಿ ಮುಖ್ಯಮಂತ್ರಿ ಹೇಳಿಕೆಯಂತೆ ಜನಸಮೂಹದ ಹಿತದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕು, ಈ ಬಗ್ಗೆ ಸರ್ಕಾರ ಸ್ಪಷ್ಟ ನೀತಿ ರೂಪಿಸಬೇಕು ಎಂದು ನ್ಯಾಯಾಲಯ ಹೇಳಿದೆ.

ಮುಖ್ಯಮಂತ್ರಿ ಸ್ಪಷ್ಟ ಭರವಸೆ ನೀಡಿದ ನಂತರ, ಆ ಭರವಸೆ ಜಾರಿಗೆ ತರಬೇಕೇ ಅಥವಾ ತರಬಾರದೇ ಎಂಬ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ನ್ಯಾಯಾಲಯ ಹೇಳಿದೆ.

**ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಮುಖ್ಯಸ್ಥರು, ಚುನಾಯಿತ ಮುಖ್ಯಸ್ಥರು ಹಾಗೂ ಜವಾಬ್ದಾರಿಯುತ ಹುದ್ದೆಯಲ್ಲಿರುವವರು ನಾಗರಿಕರಿಗೆ ಜವಾಬ್ದಾರಿಯುತ ಭರವಸೆ ನೀಡುತ್ತಾರೆ ಎಂಬ ನಿರೀಕ್ಷೆ ಇರುತ್ತದೆ. ವಿಶೇಷವಾಗಿ ಬಿಕ್ಕಟ್ಟು ಹಾಗೂ ಸಂಕಷ್ಟದ ಸಮಯದಲ್ಲಿ ಭರವಸೆಗಳು ಜವಾಬ್ದಾರಿಯುತವಾಗಿರಬೇಕು ಎಂದು ನ್ಯಾಯಾಲಯ ತಿಳಿಸಿದೆ.**

ಕೊರೊನಾ ಸಂದರ್ಭದಲ್ಲಿ ಮುಖ್ಯಮಂತ್ರಿ ನೀಡಿದ ಭರವಸೆ ಜನರಿಗೆ ಆಶಾಕಿರಣವಾಗಿತ್ತು. ಹೀಗಿರುವಾಗ ಸರ್ಕಾರ ಈ ಭರವಸೆಯನ್ನು ಏಕೆ ಕಡೆಗಣಿಸಿದೆ ಎಂಬುದು ಸ್ಪಷ್ಟವಾಗಿಲ್ಲ ಎಂದು ನ್ಯಾಯಾಲಯ ಹೇಳಿದೆ. ಲಾಕ್‌ಡೌನ್ ಘೋಷಣೆ ಮಾಡಿದ ಸಂದರ್ಭದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಕೆಯಿಂದಲೇ ಈ ಭರವಸೆ ನೀಡಲಾಗಿದೆ. ವಲಸೆ ಕಾರ್ಮಿಕರಿಗೆ ಮುಖ್ಯಮಂತ್ರಿ ನೀಡಿರುವ ಭರವಸೆ ಈಡೇರಿಸುವ ಬಗ್ಗೆ ರಾಜ್ಯ ಸರ್ಕಾರ ನಿರ್ಧರಿಸಬೇಕು. ನಿಷ್ಕ್ರಿಯತೆ ಇದಕ್ಕೆ ಉತ್ತರವಾಗದು ಎಂದು ನ್ಯಾಯಾಲಯ ಹೇಳಿದೆ.

2020ರ ಮಾರ್ಚ್ 29ರಂದು ಕೇಜ್ರಿವಾಲ್ ಅವರು ಬಾಡಿಗೆ ಪಾವತಿ ಬಗ್ಗೆ ನೀಡಿದ ಭರವಸೆಯನ್ನು ಈಡೇರಿಸಬೇಕೆಂದು ದಿನಗೂಲಿ ಕಾರ್ಮಿಕರು ಹಾಗೂ ಕಾರ್ಮಿಕರು ಹೈಕೋರ್ಟ್ ಮೊರೆ ಹೋಗಿದ್ದರು. ಕೂಲಿ ಕಾರ್ಮಿಕರು ಬಾಡಿಗೆ ಪಾವತಿಸಲು ಸಾಧ್ಯವಾಗುತ್ತಿಲ್ಲ, ಮನೆ ಮಾಲೀಕರು ಸರ್ಕಾರದಿಂದ ಬಾಡಿಗೆ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಅರ್ಜಿದಾರರು ಹೇಳಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್, ಆಶ್ವಾಸನೆಗಳೇ ಸುಳ್ಳು ಎಂಬುದು ಸಾಮಾಜಿಕ ಚರ್ಚೆಯ ವಿಷಯ. ಆದರೆ, ಸರ್ಕಾರ, ಅದರ ಅಧಿಕಾರಿಗಳು ಹಾಗೂ ಇತರೆ ಪ್ರಾಧಿಕಾರಗಳು ನೀಡಿರುವ ಭರವಸೆಗಳು ಮುರಿಯಲಿಕ್ಕಲ್ಲ. ಕೆಲ ಷರತ್ತುಗಳ ಮೇಲೆ ಅವುಗಳು ನ್ಯಾಯಿಕವಾಗಿ ಜಾರಿಗೆ ತರಲು ಸಾಧ್ಯವಿರುವಂಥವೂ ಆಗಿರುತ್ತವೆ ಎಂದು ತಿಳಿಸಿದೆ.

# ಮರೆಯುವ ಹಕ್ಕಿಗಾಗಿ ಅರ್ಜಿ

**ಗೂಗಲ್‌ನಿಂದ ತಮ್ಮ ಹಿಂದಿನ ಜೀವನ ಅಳಿಸಲು ಹೈ ಕೋರ್ಟ್‌ಗೆ ರಿಯಾಲಿಟಿ ಷೋ ತಾರೆಯ ಮನವಿ**

ನವದೆಹಲಿ, ಜು. 22 - 'ಮರೆಯುವ ಹಕ್ಕು' ತಮಗಿದೆ ಎಂದಿರುವ ರಿಯಾಲಿಟಿ ಷೋದ ತಾರೆ ಅಶುತೋಶ್ ಕೌಶಿಕ್, ತಮ್ಮ ಕುರಿತ ಕೆಲ ವಿಡಿಯೋ, ಫೋಟೋ ಹಾಗೂ ಲೇಖನಗಳನ್ನು ಆನ್‌ಲೈನ್ ವೇದಿಕೆಯಿಂದ ಕಿತ್ತು ಹಾಕುವಂತೆ ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಖಾಸಗಿತನದ ಹಕ್ಕು ಹಾಗೂ ಮರೆಯುವ ಹಕ್ಕಿದೆ ಎಂದು ವಾದ ಮಂಡಿಸಿರುವ ಕೌಶಿಕ್, ತಮ್ಮ ಕುರಿತ ಹಳೆಯ ವಿವರಗಳು ಆನ್‌ಲೈನ್‌ನಲ್ಲಿ ಲಭ್ಯವಾಗುತ್ತಿರುವುದರಿಂದ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮವಾಗುತ್ತಿದೆ ಎಂದಿದ್ದಾರೆ.

ಅರ್ಜಿಯ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ರೇಖಾ ಪಳ್ಳಿ, ಈ ಬಗ್ಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ, ಗೂಗಲ್, ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ಎಲೆಕ್ಟ್ರಾನಿಕ್ ಮೀಡಿಯಾ ಮಾನಿಟರಿಂಗ್ ಸೆಂಟರ್‌ಗಳಿಗೆ ನೋಟಿಸ್ ಕಳಿಸಿದ್ದಾರೆ.

ಅಧಿಕಾರಿಗಳು ನಾಲ್ಕು ವಾರಗಳಲ್ಲಿ ಉತ್ತರ ನೀಡಬೇಕು ಎಂದು ಹೇಳಿರುವ ನ್ಯಾಯಾಲಯ, ವಿಚಾರಣೆಯನ್ನು ಡಿಸೆಂಬರ್‌ಗೆ ಮುಂದೂಡಿದೆ.

ಎಂಟಿವಿ ಹೀರೋ ಹೊಂಡಾ ರೋಡೀಸ್‌ನ ಐದನೇ ಆವೃತ್ತಿಯಲ್ಲಿ ಗೆದ್ದಿದ್ದ ಕೌಶಿಕ್, ಬಿಗ್ ಬಾಸ್‌ನ ಎರಡನೇ ಆವೃತ್ತಿಯಲ್ಲೂ ಭಾಗಿಯಾಗಿದ್ದರು.

ತಮ್ಮ ಕುರಿತ ವಿಡಿಯೋ, ಫೋಟೋ ಹಾಗೂ ಇತರೆ ಮಾಹಿತಿಯನ್ನು ಆನ್‌ಲೈನ್ ವೇದಿಕೆ ಮೂಲಕ ಕಿತ್ತು ಹಾಕಬೇಕು ಎಂದು ಕೇಳಿರುವ ಅವರು, ವ್ಯಕ್ತಿಗಳಿಗೆ ಮರೆಯುವ ಹಕ್ಕಿದೆ. ಮೂರನೇ ವ್ಯಕ್ತಿಗಳಿಗೆ ತಮ್ಮ ಕುರಿತ ದಾಖಲೆಗಳು ಸಿಗದಂತೆ ಮಾಡಲು ಕ್ರಮ ಕೇಳಬಹುದಾಗಿದೆ ಎಂದಿದ್ದಾರೆ.

ಖಾಸಗಿತನದ ಹಕ್ಕಿನ ಜೊತೆಗೆ ಮರೆಯುವ ಹಕ್ಕು ಸೇರ್ಪಡೆಯಾಗಿದೆ. ಸಂವಿಧಾನದ 21ನೇ ವಿಧಿಯಡಿ ಖಾಸಗಿತನದ ಹಕ್ಕು ಬರುತ್ತದೆ ಎಂದು ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ತಿಳಿಸಲಾಗಿದೆ (5ನೇ ಪುಟಕ್ಕೆ)

# ವರಿಷ್ಠರ ಸೂಚನೆಯಂತೆ ಶಾಸಕಾಂಗ ಸಭೆ ರದ್ದು

ಬೆಂಗಳೂರು, ಜು. 22 - ವರಿಷ್ಠರ ಆದೇಶದಂತೆ ಜುಲೈ 25 ರಂದು ನಡೆಯಬೇಕಿದ್ದ ಬಿಜೆಪಿ ಶಾಸಕಾಂಗ ಸಭೆ ಹಾಗೂ ಶಾಸಕರಿಗೆ ಔತಣ ಕೂಟವನ್ನು ರದ್ದುಪಡಿಸಲಾಯಿತು ಎಂದು ಗೃಹ ಸಚಿವ ಬಸವರಾಜ್ ಬೊಮ್ಮಾಯಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಕ್ಕೆ ಎರಡು ವರ್ಷ ತುಂಬಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ಔತಣಕೂಟ ಏರ್ಪಡಿಸಿದ್ದರು. ಆದರೆ ಇದೆಲ್ಲ ಮಾಡದಂತೆ ವರಿಷ್ಠರು ಸೂಚನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಔತಣ ಕೂಟ ಹಾಗೂ ಶಾಸಕಾಂಗ ಸಭೆ ರದ್ದು ಮಾಡಲಾಯಿತು ಎಂದರು.

# ಆಕ್ಸಿಜನ್ ಘಟಕ ನಿರ್ವಹಣೆ ಐಟಿಐ ವಿದ್ಯಾರ್ಥಿಗಳಿಗೆ

ಬೆಂಗಳೂರು, ಜು. 22 - ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳು ಸೇರಿದಂತೆ ಸಮುದಾಯ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಆಕ್ಸಿಜನ್ ಉತ್ಪಾದಕ ಘಟಕಗಳನ್ನು ಸ್ಥಾಪಿಸಲಾಗುತ್ತಿದ್ದು, ಅವುಗಳ ನಿರ್ವಹಣೆ ಮತ್ತು ಕಾರ್ಯಾಚರಣೆಗೆ ಐಟಿಐ ವಿದ್ಯಾರ್ಥಿಗಳನ್ನೇ ನೇಮಕ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಐಟಿಐನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಆಕ್ಸಿಜನ್ ಘಟಕಗಳ ನಿರ್ವಹಣೆ-ಕಾರ್ಯಾಚರಣೆ ಕುರಿತ ಆನ್‌ಲೈನ್ ತರಬೇತಿಗೆ ವರ್ಚ್ಯುಯಲ್ ಕಾರ್ಯಕ್ರಮದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

ಈಗಾಗಲೇ ರಾಜ್ಯದ ಪ್ರತಿಯೊಂದು ಆಸ್ಪತ್ರೆಯಲ್ಲಿ ಆಕ್ಸಿಜನ್ ಘಟಕಗಳನ್ನು ಸ್ಥಾಪನೆ ಮಾಡಲು ನಿರ್ಧರಿಸಲಾಗಿದೆ. ಇದುವರೆಗೆ 350 ಘಟಕಗಳನ್ನು ಅಳವಡಿಸಲಾಗಿದೆ. ಇವುಗಳ ನಿರ್ವಹಣೆಯ ಹೊಣೆಯನ್ನು ಐಟಿಐ ವಿದ್ಯಾರ್ಥಿಗಳಿಗೆ ವಹಿಸುವುದು ಉತ್ತಮ ಎಂದರು.

# 27 ಪಾಸಿಟಿವ್, 28 ಗುಣ

ದಾವಣಗೆರೆ, ಜು.22- ಜಿಲ್ಲೆಯಲ್ಲಿ ಗುರುವಾರ 27 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 28 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 8, ಜಗಳೂರು 2, ಚನ್ನಗಿರಿ 8, ಹೊನ್ನಾಳಿ 7 ಹಾಗೂ ಹೊರ ಜಿಲ್ಲೆಯ ಇಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. ಜಿಲ್ಲೆಯಲ್ಲಿ 345 ಸಕ್ರಿಯ ಪ್ರಕರಣಗಳಿವೆ.

# ಪಿಯು ಪರಿಕ್ಷೆಯಲ್ಲಿ ಸೈನ್ಸ್ ಅಕಾಡೆಮಿ ಸಾಧನೆ








ದಾವಣಗೆರೆ, ಜು.22 - 2020-21ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ನಗರದ ಸೈನ್ಸ್ ಅಕಾಡೆಮಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಮತ್ತು ಪ್ರಥಮ ಪಿಯುಸಿ ಆಧಾರದ ಮೇಲೆ ಉತ್ತಮ ಅಂಕ ಪಡೆದು ಸಾಧನೆ ಮಾಡಿದ್ದಾರೆ.

ಕು.ಸುಚಿತ ಜಿ.ಇ. 600 ಅಂಕಗಳಿಗೆ 600 ಅಂಕ ಪಡೆದು ಶೇ. 100 ರಷ್ಟು ಫಲಿತಾಂಶ ಪಡೆದಿದ್ದಾಳೆ, ಕು.ಚೈತ್ರ ಜೆ.ಎಸ್.ಹಾಗೂ ಕು. ಅಬ್ದುಲ್ ಖಾದರ್ ಜಿಲಾನಿ 599/600 ಶೇ (99.86 ), ಕು.ಶಶಾಂಕ್ ಕೆ.ಎಸ್ 567/600 (99.50%), ಕು. ಬಿಸ್ವಾಸ್ ಪಾಂಡೆ 596/600 ಕು. ನಂದೀಶ್ ಸಿ 594/600 (99.00%) ರಷ್ಟು ಅಂಕ ಪಡೆದು ಸಾಧನೆ ಮಾಡಿರುತ್ತಾರೆ. ಒಟ್ಟಾರೆ ಕಾಲೇಜಿನಿಂದ 214 ವಿದ್ಯಾರ್ಥಿಗಳಲ್ಲಿ 96 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ, 114 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಈ ಎಲ್ಲಾ ವಿದ್ಯಾರ್ಥಿಗಳನ್ನು ಕಾಲೇಜು ಆಡಳಿತ ಮಂಡಳಿ ಕಾರ್ಯದರ್ಶಿ ವೈ.ವಿ. ವಿನಯ್, ಅಧ್ಯಕ್ಷ ಎ.ಹೆಚ್. ಶಶಿಕಿರಣ್, ಉಪಾಧ್ಯಕ್ಷ ರಘು ಕೆ., ಸಂಸ್ಥೆ ನಿರ್ದೇಶಕರು ಹಾಗೂ ಮಹಾನಗರ ಪಾಲಿಕೆ ಮೇಯರ್ ಎಸ್. ಟಿ.ವೀರೇಶ್, ಕಾಲೇಜಿನ ಪ್ರಾಂಶುಪಾಲ ಜಿ. ವಿರೂಪಾಕ್ಷಪ್ಪ ಅಭಿನಂದಿಸಿದ್ದಾರೆ.

# ಭದ್ರಾ ಪಿ.ಯು. ಕಾಲೇಜಿಗೆ ಉತ್ತಮ ಫಲಿತಾಂಶ




ದಾವಣಗೆರೆ, ಜು.22- ನಗರದ ಭದ್ರಾ ಪದವಿ ಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬಂದಿದೆ.

ವಿಜ್ಞಾನ ವಿಭಾಗದಲ್ಲಿ ಉನ್ನತ ಶ್ರೇಣಿ 4, ಪ್ರಥಮ ಸ್ಥಾನ 34, ದ್ವಿತೀಯ ಸ್ಥಾನದಲ್ಲಿ 10 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಉನ್ನತ ಶ್ರೇಣಿ 4, ಪ್ರಥಮ ಸ್ಥಾನ 24, ದ್ವಿತೀಯ ಸ್ಥಾನದಲ್ಲಿ 14, ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಆದಿತ್ಯಾ ವಿ.ಬಿ 552 ಹಾಗೂ ವಾಣಿಜ್ಯ ವಿಭಾಗದಲ್ಲಿ ದಾಕ್ಷಾಯಿಣಿ ಜಿ.ಕೆ 540 ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾಗಿದ್ದಾರೆ.

# ಶಿವಾನಂದ ತೀರ್ಥ ಅಧ್ಯಾತ್ಮ ಮಂದಿರದ ವಾರ್ಷಿಕೋತ್ಸವ

**ನಗರದಲ್ಲಿ ಇಂದು**



ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಶ್ರೀ ಶಿವಾನಂದ ತೀರ್ಥ ಗುರು ಅಧ್ಯಾತ್ಮ ಮಂದಿರದ 35ನೇ ವಾರ್ಷಿಕೋತ್ಸವದ ಪ್ರತಿಷ್ಠಾಪನಾ ಸಂಸ್ಮರಣ ಮತ್ತು 108 ಕಳಶಗಳ ಶ್ರೀ ಸತ್ಯದತ್ತ ವ್ರತ ಮಹೋತ್ಸವ ಇಂದು ನಡೆಯಲಿದೆ. ಪ್ರಾತಃಕಾಲ ಕಾಕಡಾರತಿ, ಗಣಪತಿ ಪೂಜೆ, ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ ನಡೆಯಲಿದೆ.

ಬೆಳಿಗ್ಗೆ 10 ರಿಂದ 108 ಕಳಶಗಳ ಶ್ರೀ ಸತ್ಯ ದತ್ತವ್ರತ ಪೂಜಾ, ಮಧ್ಯಾಹ್ನ 12.30 ಕ್ಕೆ ಮಹಾಮಂಗಳಾರತಿ, ತೀರ್ಥ-ಪ್ರಸಾದ ವಿನಿಯೋಗ ಜರುಗಲಿದೆ. ದಿ. ಶ್ರೀಮತಿ ಅಜ್ಜಂಪುರ ಭಾಗ್ಯಲಕ್ಷ್ಮಮ್ಮ, ದಿ. ಎ.ಆರ್. ಗೋವಿಂದಸ್ವಾಮಿ ಶ್ರೇಷ್ಠಿ ಇವರ ಮಕ್ಕಳಾದ ಎ.ಜಿ. ಮಂಜುನಾಥ್, ಎ.ಜಿ. ವೆಂಕಟೇಶ್ ಅವರಿಂದ ನಂದಾದೀಪ ಸೇವೆ ನಡೆಯುವುದು. ಶ್ರೀಮತಿ ಕಾಂತಲಕ್ಷ್ಮಮ್ಮ ಆರ್.ವಿ. ಗೋಪಾಲಕೃಷ್ಣ ಶ್ರೇಷ್ಠಿಯವರ ಮಕ್ಕಳು ಮತ್ತು ಶ್ರೀ ರಾಜನಹಳ್ಳಿ ಹರಿಹರಪ್ಪ ಟ್ರಸ್ಟ್ ಕಾರ್ಯಕಾರಿ ಸಮಿತಿ ಅವರುಗಳು ಕಾರ್ಯಕ್ರಮದ

# ಸಕ್ರಿಯ ಸೋಂಕು ಹೆಚ್ಚಳ

ನವದೆಹಲಿ, ಜು. 22 – ದೇಶದಲ್ಲಿ ಸತತ 2ನೇ ದಿನ ಸಕ್ರಿಯ ಸೋಂಕಿತರ ಸಂಖ್ಯೆ ಹೆಚ್ಚಾಗಿದೆ. ಇಂದು 41,383 ಕೊರೊನಾ ಸೋಂಕಿತರು ಪತ್ತೆ ಯಾಗಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸಕ್ರಿಯ ಸೋಂಕಿತರ ಸಂಖ್ಯೆ ಕಳೆದ 24 ಗಂಟೆಗಳಲ್ಲಿ 2,224 ಹೆಚ್ಚಾಗಿದೆ. ಇದೇ ದಿನ 507 ಜನ ಸಾವನ್ನಪ್ಪಿದ್ದಾರೆ. ಕೊರೊನಾ ಟೆಸ್ಟ್‌ಗಳಲ್ಲಿ ಪಾಸಿಟಿವ್ ದರ ಶೇ.2.41ರಷ್ಟಿದೆ. ವಾರದ ಪಾಸಿಟಿವ್ ದರ ಶೇ.2.12ರಷ್ಟಿದೆ.


**WANTED**

**1) Required Cashier (Male) for Textile Business with Basic Knowledge of Managing and Cash Handling.**


Salary Negotiable. Interested can Apply with proper Resume along with Photo Attested.

**ASHUJI DISTRIBUTORS**
**# 323, Binny Company Road, Davangere.**



**ಬಿ.ಎಸ್.ವೈ. ಎಂದೆಂದಿಗೂ ಕರ್ನಾಟಕದ ರಾಜಾಹುಲಿ**

ಕರ್ನಾಟಕದ ಎಲ್ಲಾ ಮಠಾಧೀಶರುಗಳು ಮುಖ್ಯಮಂತ್ರಿ
**ಶ್ರೀ ಬಿ.ಎಸ್. ಯಡಿಯೂರಪ್ಪ**
ಅವರಿಗೆ ಸಕಲ ರೀತಿಯಿಂದ ಆಶೀರ್ವದಿಸಿ ಬೆಂಬಲಿಸಿದ್ದಾರೆ.
ಎಲ್ಲಾ ಮಠಾಧೀಶರುಗಳಿಗೆ ತುಂಬು ಹೃದಯದ ನಮನಗಳು.
ಯಡಿಯೂರಪ್ಪನವರು ಬಿಜೆಪಿ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿದು ಮುಖ್ಯಮಂತ್ರಿ ಸ್ಥಾನವನ್ನಲಂಕರಿಸಿದ್ದಾರೆ.
ಇವರನ್ನು ರಾಜ್ಯದ ನಾಯಕರು ಪಕ್ಷಾತೀತವಾಗಿ ಬೆಂಬಲಿಸಿದ್ದಾರೆ.
ರಾಜ್ಯದ ಜನತೆ ಕೂಡಾ ಯಡಿಯೂರಪ್ಪನವರನ್ನು ಬಿಟ್ಟುಕೊಡಲು ತಯಾರಿಲ್ಲ. ಯಡಿಯೂರಪ್ಪನವರ ಮಕ್ಕಳೂ ಸಹ ಸಾಮಾನ್ಯ ಕಾರ್ಯಕರ್ತರಾಗಿ ದುಡಿದು ವಿವಿಧ ಹುದ್ದೆಗಳಿಗೇರಿದ್ದಾರೆ.
**'ಯಡಿಯೂರಪ್ಪನವರು ಮುಖ್ಯಮಂತ್ರಿ ಸ್ಥಾನದಲ್ಲಿದ್ದರೂ ಹುಲಿ, ಪದವಿಯಿಂದ ಕೆಳಗಿಳಿದರೂ ಹುಲಿ'**




ಇವರಿಗೆ ಅಖಂಡ ಕರ್ನಾಟಕದ ಮಠಾಧೀಶರು, ರಾಜ್ಯದ ಜನತೆ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರು, ಪದಾಧಿಕಾರಿಗಳು ಬೆಂಬಲ ವ್ಯಕ್ತಪಡಿಸಿದ್ದಾರೆ. ಇವರೆಲ್ಲರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು.

ರಾಷ್ಟ್ರೀಯ ಹಾಗೂ ರಾಜ್ಯ ನಾಯಕರುಗಳ ನಿರೀಕ್ಷೆಯಲ್ಲಿರುವ ಉತ್ತರ ವಿಧಾನಸಭಾ ಕ್ಷೇತ್ರದ ಮುಂದಿನ ಪ್ರಬಲ ಅಭ್ಯರ್ಥಿ

**ಶಾಮನೂರು ಕಲ್ಲೇಶ್ ಜಿ.ಆರ್.**
ಬಿಜೆಪಿ ಮುಖಂಡರು
ಮೊಬೈಲ್ : 87229 99997, 87225 55557, 98456-02252

# ವಿಟಿಯು ಪದವಿ, ಸ್ನಾತಕೋತ್ತರ ಪರೀಕ್ಷೆಗಳನ್ನು ಮುಂದೂಡಲು ಎನ್‌ಎಸ್‌ಯುಐ ಆಗ್ರಹ




ದಾವಣಗೆರೆ, ಜು.22- ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ಪ್ರಥಮ ವರ್ಷದ ಪದವಿ, ಸ್ನಾತಕೋತ್ತರ ಪರೀಕ್ಷೆಗಳನ್ನು ಮುಂದೂಡುವಂತೆ ಆಗ್ರಹಿಸಿ ನಗರದ ಯುಬಿಡಿಟಿ ಕಾಲೇಜು ಮುಂಭಾಗದಲ್ಲಿ ಇಂದು ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾ (ಎನ್ ಎಸ್ ಯುಐ) ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪ್ರಥಮ ವರ್ಷದ ಪದವಿ, ಸ್ನಾತಕೋತ್ತರ ಪದವಿ (ಬಿ.ಇ, ಬಿ.ಟೆಕ್, ಎಂ.ಟೆಕ್, ಎಂಸಿಎ ಮತ್ತಿತರೆ) ಪರೀಕ್ಷೆಗಳನ್ನು ಜು.26ರಿಂದ ಪ್ರಾರಂಭಿಸಲಾಗುತ್ತಿದೆ. ಆದರೆ, ಪ್ರಕಟಣೆ ಕೇವಲ 10 ದಿನಗಳ ಅಂತರದ ಅವಧಿಯಾಗಿದೆ. ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆ ಬರೆಯುವ ಹೊರ ರಾಜ್ಯದ ವಿದ್ಯಾರ್ಥಿಗಳು ಹಾಗೂ ಅಂತರ್ ಜಿಲ್ಲಾ ವಿದ್ಯಾರ್ಥಿಗಳು ತಂಗಲು ವ್ಯವಸ್ಥೆ ಮಾಡಿಕೊಂಡಿಲ್ಲ. ಕೊರೊನಾ ಕಾರಣ ವಸತಿ ನಿಲಯಗಳಲ್ಲಿ ವ್ಯವಸ್ಥೆ ನೀಡಿಲ್ಲ ಎಂದು ವಿದ್ಯಾರ್ಥಿಗಳ ಪರವಾಗಿ ಎನ್ ಎಸ್ ಯುಐ ಕಾರ್ಯಕರ್ತರು ವಿಟಿಯು ಗಮನ ಸೆಳೆದರು.

ಪ್ರಥಮ ವರ್ಷದ ಎಲ್ಲಾ ಪರೀಕ್ಷೆಗಳನ್ನು ಇನ್ನೂ ಒಂದು ತಿಂಗಳು ಮುಂದೂಡಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಅಗತ್ಯ ವ್ಯವಸ್ಥೆ ಕಲ್ಪಿಸಬೇಕೆಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸೈಯದ್ ಸುಹೇಲ್, ರಾಘವೇಂದ್ರ, ಹೆಚ್.ಎಂ. ಮನೋಜ್ ಕುಮಾರ್, ಅಣ್ಣೇಶ್, ರಮೇಶ್, ಖಮರ್ ರಜಾ, ಅಹಮದ್ ರಜಾ ಸೇರಿದಂತೆ ಇತರರು ಭಾಗವಹಿಸಿದ್ದರು.

## ಮಲ್ಲಿಕಾರ್ಜುನ ಸಮುದಾಯ ಭವನಕ್ಕೆ ಲಿಫ್ಟ್ ಅಳವಡಿಸಲು ಮನವಿ



ದಾವಣಗೆರೆ, ಜು.22- ಸ್ಥಳೀಯ ಕೆಟಿಜೆ ನಗರದ ಶ್ರೀ ಮಲ್ಲಿಕಾರ್ಜುನ ಸಮುದಾಯ ಭವನಕ್ಕೆ ಶೇ. 24.10 ರ ಅನುದಾನದಲ್ಲಿ ಅಂಗವಿಕರಿಗೆ ಹಾಗೂ ವೃದ್ಧರಿಗೋಸ್ಕರ ಲಿಫ್ಟ್ ಅಳವಡಿಸಲು ಮತ್ತು ನೆಲ ಅಂತಸ್ತಿಗೆ ಗ್ರಾನೈಟ್ ಮತ್ತು ಟೈಲ್ಸ್ ಅಳವಡಿಸಲು ಮಹಾಪೌರರಾದ ಎಸ್.ಟಿ. ವೀರೇಶ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿಯೂ ಆದ ಕೆಪಿಸಿಸಿ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ, ಯುವ ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ್ ಮತ್ತಿತರರು ಮೇಯರ್ ಅವರಿಗೆ ಮನವಿ ಸಲ್ಲಿಸಿದರು.

## ಪೂರ್ಣ ಹುಣ್ಣಿಮೆ




ಪೂರ್ಣ ಹುಣ್ಣಿಮೆ ಚಂದಿರ ನಿನ್ನ ಸೊಬಗನೆಂತು ಬಣ್ಣಿಸಲಿ,
ನಿನ್ನ ಉದಯ ಭೂಮಿಗೆ ತಿಂಗಳ ಬೆಳಕಾಯಿತು.
ಹಾಲು ಚಲ್ಲಿದಂತೆ ನಿನ್ನ ಅಮೃತ ಕಿರಣ ಪಸರಿಸಿತು,
ಹಾಲುಗಲ್ಲದ ಮಗುವಿನಂತೆ, ಮಲ್ಲಿಗೆ ಮೊಗದ ಸ್ತ್ರೀಯಂತೆ.

ನವರಸ ರಾಗಗಳು ನಿನ್ನಲ್ಲಿ ಉಕ್ಕಿ ಹರಿದಂತೆ,
ರಾಘವಾಂಕರ ಷಟ್ಪದಿ ಯಲ್ಲಿ ಝೇಂಕರಿಸಿದಂತೆ.
ಶೃಂಗಾರ, ಹಾಸ್ಯ,ವೀರ, ಬೀಭತ್ಸ,ಅದ್ಬುತ, ಶಾಂತ,
ಅತಿರೌದ್ರ, ಭಯ, ಕರುಣಾ ರಸಗಳ ಪ್ರವಾಹದ
ಹಿಮ ಕಿರಣಗಳ ಬೀರಿದೆ.

ರೋಹಿಣಿ ಪ್ರಿಯನಾದ, ಇಪ್ಪತ್ತೇಳು ನಕ್ಷತ್ರಗಳ ಪತಿ ನೀನು.
ನಿನ್ನನ್ನು ಆಧರಿಸಿ ಹಬ್ಬ ಹರಿದಿನಗಳ ಆಚರಿಸುವರು.
ಋತುವಿಗೆ ಎರಡು ಹುಣ್ಣಿಮೆಗಳಾಗಿ ಬಾಳಿಗೆ ಸುಂದರವಾದೆ.

ಪೂರ್ಣ ಹುಣ್ಣಿಮೆ ನಿನಗೆಷ್ಟು ಹೆಸರು ಹಾಡಲು, ಆಚರಿಸಲು,
ಚಿತ್ರ ಪೂರ್ಣಿಮಾ, ಬುದ್ಧ ಪೂರ್ಣಿಮಾ, ಕಾರ ಹುಣ್ಣಿಮೆ,
ಗುರು ಪೂರ್ಣಿಮಾ, ನೂಲ ಹುಣ್ಣಿಮೆ, ಅನಂತನ ಹುಣ್ಣಿಮೆ,
ಶೀಗಿ ಹುಣ್ಣಿಮೆ, ಕಾರ್ತಿಕ ಹುಣ್ಣಿಮೆ, ಹೊಸ್ತಿಲ ಹುಣ್ಣಿಮೆ,
ಬನದ ಹುಣ್ಣಿಮೆ, ವ್ಯಾಸ ಹುಣ್ಣಿಮೆ, ಹೋಳಿ ಹುಣ್ಣಿಮೆ.

ನಲ್ಲ - ನಲ್ಲೆಯರು ಮಂದಸ್ಮಿತರಾದರು ನಿನ್ನಯ ಬೆಳಕಿನಲಿ.
ಶಾಂತ ಬುದ್ದನ ಆರಾಧನೆಯಾದೆ, ಕರಗ ಸಂಭ್ರಮಕೆ ಹಾದಿಯಾದೆ.
ಗೂಡು ದೀಪವಾಗಿ, ಕಾರ್ತಿಕ ದೀಪಗಳಾಗಿ ಬೆಳಗಿದೆ.
ಚನ್ನ ಚನ್ನೆಯರ ಚೆನ್ನಮಣಿಯಾದೆ, ಮೈಗೆ ಬಣ್ಣವಾದೆ.
ಪೂಜ್ಯ ರಾಸುಗಳ ಕೊಂಬಿನ ಶೋಭಾಲಂಕರವಾದೆ.

ಕರುಣಾಮಯಿಯಾದ ನಿನಗೆ ಸಮುದ್ರದ ಮೇಲೆಕೆ ಮುನಿಸು,
ಭೂಮಿಗೆ ಹತ್ತಿರವಾಗಿ ಭಯದ ಅಲೆಗಳ ಅಬ್ಬರಿಸಿದೆ.
ಮನುಜನ ಸುಪ್ತ ಪ್ರಜ್ಞೆ ಯ ಮೇಲೆ ನಿನ್ನಯ ಪ್ರಭಾವ,
ಆಯಿತು, ನೆಲೆ ನಿಲ್ಲದ ಕುದುರೆಯಂತೆ.

ನಿನ್ನ ಹಿಡಿಯ ಹೊರಟ ಮುಗ್ದ ಮಗುವಿನ ಆಟಿಕೆಯಾದೆ.
ಮೋಡಗಳ ಮರೆಯಲಿ ಕಣ್ಣು ಮುಚ್ಚಾಲೆ ಆಡಿ
ತುತ್ತುಣಿಸುವ ಅಮ್ಮನಿಗೆ ಕಾಡಿದೆ.ಬಾನಲಿ
ನಿನ್ನಯ ಹೊಂಬೆಳಕನು ನೋಡುತ ಶಾಂತನಾದೆ.

**- ಹೆಚ್.ಎನ್. ಶಿವಕುಮಾರ್.**
ಮಾಜಿ ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ.

# ಹರಿಹರದಲ್ಲಿ ಇಂದು ಉಚಿತ ಲಸಿಕೆ



ಹರಿಹರ, ಜು.22- ಶ್ರೀ ಜಗದ್ಗುರು ವಿಶ್ವಕರ್ಮ ಮಹಾಸಂಸ್ಥಾನ ಸಾವಿತ್ರಿ ಪೀಠ ಕಾಶೀಮಠ, ವಡ್ನಾಳ್ ವಿಶ್ವಕರ್ಮ ಮಠ ಹಾಗೂ ಹರಿಹರ ತಾಲ್ಲೂಕು ವಿಶ್ವಕರ್ಮ ಸಮಾಜದ ಸಹಯೋಗದಲ್ಲಿ ನಾಳೆ ದಿನಾಂಕ 23 ರ ಶುಕ್ರವಾರ ಮರಿಯ ನಿವಾಸ ಶಾಲೆ ಆವರಣದಲ್ಲಿ ಸರ್ವ ಧರ್ಮದವರಿಗೆ ಉಚಿತ ಕೊರೊನಾ ಲಸಿಕೆ ಹಾಕಿಸುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಬೆನಕಪ್ಪ ಆಚಾರ್ ತಿಳಿಸಿದ್ದಾರೆ.

ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಬೆಂಗಳೂರು ಲಕ್ಷ್ಮಿ ನರ್ಸಿಂಗ್ ಹೋಂ ಇವರನ್ನು ವೈದ್ಯಕೀಯ ಪಾಲುದಾರರನ್ನಾಗಿ ನೇಮಿಸಿಕೊಂಡು ನಗರದಲ್ಲಿನ ಸುಮಾರು 2500 ಜನರಿಗೆ ಲಸಿಕೆಯನ್ನು ಹಾಕಲಾಗುತ್ತದೆ.

ಜಿಲ್ಲಾ ಆಡಳಿತ, ತಾಲ್ಲೂಕು ಆಡಳಿತ, ಆರೋಗ್ಯ ಇಲಾಖೆ, ಆರ್‌ಸಿಹೆಚ್ ಇತರೆ ಲಸಿಕೆಗೆ ಸಂಬಂಧಿಸಿದ ಇಲಾಖೆಗಳು ಅನುಮತಿ ನೀಡಿರುತ್ತಾರೆ ಎಂದು ಮಾಹಿತಿ ನೀಡಿದರು.

ವಿಶ್ವಕರ್ಮ ಸಮಾಜದ ಮುಖಂಡ ವೀರೇಶ್ ಆಚಾರ್ ಮಾತನಾಡಿ, ಸಾರ್ವಜನಿಕರು ಲಸಿಕೆಯನ್ನು ಪಡೆಯಲು ಪಡುತ್ತಿರುವ ತೊಂದರೆಯನ್ನು ನಾನು ಸಾರ್ವಜನಿಕ ಆಸ್ಪತ್ರೆಯ ಸಲಹಾ ಸಮಿತಿಯ ಸದಸ್ಯನಾಗಿ ಗಮನಿಸುತ್ತಾ ಬಂದಿದ್ದೇನೆ. ನಮ್ಮ ಶ್ರೀಗಳ ಗಮನಕ್ಕೆ ತಂದಾಗ ಇಲ್ಲಿನ ಜನರಿಗೆ ಲಸಿಕೆಯನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷ ರುದ್ರಾಚಾರ್, ಲಕ್ಷ್ಮೀ ರಾಜಚಾರ್, ಮಂಜುನಾಥ್ ಆಚಾರ್, ಹೇಮಾಚಾರ್ ಬನ್ನಿಕೋಡು, ಬಿ.ಎಸ್. ನಾಗರಾಜ್, ವಕೀಲ ಚಂದ್ರಚಾರ್, ಜನಾರ್ಧನ ಆಚಾರ್, ಉಮೇಶ್ ಆಚಾರ್ ಇನ್ನಿತರರಿದ್ದರು.

# ಟಿ.ಶ್ರೀಧರ್ ಹತ್ಯೆಗೆ ಕುಮ್ಮಕ್ಕು ನೀಡಿರುವವರನ್ನು ಬಂಧಿಸಲು ಆಗ್ರಹ




ಹರಪನಹಳ್ಳಿ, ಜು.22- ಆರ್‌ಟಿಐ ಕಾರ್ಯಕರ್ತ ಟಿ. ಶ್ರೀಧರ್ ಹತ್ಯೆಗೆ ಕುಮ್ಮಕ್ಕು ನೀಡಿರುವ ಪ್ರಭಾವಿ ವ್ಯಕ್ತಿಗಳನ್ನು ಕೂಡಲೇ ಬಂಧಿಸುವಂತೆ ಹಾಗೂ ಸಿಒಡಿ ತನಿಖೆಗೆ ಆಗ್ರಹಿಸಿ ವಿವಿಧ ಪ್ರಗತಿ ಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಸಂಘಟನೆಯ ಹೊಸಹಳ್ಳಿ ಮಲ್ಲೇಶ್ ಮಾತನಾಡಿ, ಹತ್ಯೆಗೀಡಾಗಿರುವ ಶ್ರೀಧರ್ ಅವರ ಪತ್ನಿ ಶಿಲ್ಪಾ ನೀಡಿರುವ ದೂರಿನಲ್ಲಿ ಹೆಸರಿಸಿರುವಂತಹ ಪ್ರಭಾವಿ ವ್ಯಕ್ತಿಗಳು ಹಾಗೂ ಅವರ ಒಡನಾಡಿಗಳು ಹಾಗೂ ಕಾಣದ ಕೈಗಳಿದ್ದು, ಕೊಲೆ ಪಾತಕರಿಗೆ ಕುಮ್ಮಕ್ಕು ನೀಡಿ ಹಣ ಹಂಚಿಕೆ ಮಾಡಿರುವವರನ್ನು ತಕ್ಷಣ ಬಂಧಿಸಿ ಸೂಕ್ತ ತನಿಖೆ ಕೈಗೊಳ್ಳಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಸಿಪಿಐ ಮುಖಂಡ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಶ್ರೀಧರ್ ಅವರ ಕುಟುಂಬ ವರ್ಗದವರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದರು. ರೈತ ಸಂಘದ ಕಲ್ಲಹಳ್ಳಿ ಗೋಣೆಪ್ಪ, ಮಹಿಳಾ ವಿಮೋಚನಾ ಸಂಘದ ಟಿ.ವಿ. ರೇಣುಕಮ್ಮ ಮಾತನಾಡಿದರು.

ವಿವಿಧ ಸಂಘಟನೆಗಳ ಮುಖಂಡರಾದ ಹುಲಿಕಟ್ಟಿ ರಹಮತ್‌ವುಲ್ಲಾ, ಟಿ. ಪದ್ಮಾವತಿ, ಹಗರಿಬೊಮ್ಮನಹಳ್ಳಿಯ ರೈತ ಸಂಘದ ಶಾಹೀದಾ ಬೇಗಂ, ಕೆ.ಪ್ರಕಾಶ್, ಎಚ್.ಬಿ. ಸಿದ್ದೇಶ್. ಎಂ. ಶಬ್ಬೀರ್, ಈರಪ್ಪ, ಎಚ್. ಅಂಜಿನಮ್ಮ, ಲಲಿತಮ್ಮ ಎ.ಡಿ.ದ್ವಾರಕೇಶ ಹಾಗೂ ಇತರರು ಪಾಲ್ಗೊಂಡಿದ್ದರು.


## ಜಿಲ್ಲಾ ಕೈಮಗ್ಗ - ಜವಳಿ ಇಲಾಖೆಯಿಂದ ಕಾರ್ಮಿಕರಿಗೆ ಲಸಿಕೆ ಕಾರ್ಯಕ್ರಮ



ದಾವಣಗೆರೆ, ಜು.22- ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಕೋವಿಡ್ - 19 ಪ್ರಯುಕ್ತ ಜವಳಿ ಕೈಗಾರಿಕಾ ಕಾರ್ಮಿಕರಿಗೆ ಲಸಿಕೆ ನೀಡುವ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮದಲ್ಲಿ ಆಯೋಜಕ ಶ್ರೀನಿವಾಸ್ ಚಿನ್ನಿಕಟ್ಟಿ, ಕೋಮಲ್ ಜೈನ್, ಡಿ. ಶೇಷಾಚಲ, ರಘು, ಮಂಜುನಾಥ್ ನಾಯ್ಕ್ ಹಾಗೂ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕ ಸುರೇಶ್ ತಡಕನಹಳ್ಳಿ, ಅಪ್ಪಾರೇಖಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಡಾ. ನವ್ಯಾ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಶ್ರೀಧರ್ ಹತ್ಯೆ ಸಿಐಡಿ ತನಿಖೆಗೆ ವಹಿಸಿ



ಹರಪನಹಳ್ಳಿ, ಜು.22- ಆರ್‌ಟಿಐ ಕಾರ್ಯಕರ್ತ ಟಿ. ಶ್ರೀಧರ್ ಹತ್ಯೆ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಬೇಕು ಎಂದು ಗೃಹ ಇಲಾಖೆ ಹಾಗೂ ಡಿಐಜಿಗೆ ಪತ್ರ ಬರೆಯುವುದಾಗಿ ಕರ್ನಾಟಕ ರಾಷ್ಟ್ರ ಸಮಿತಿ ರಾಜ್ಯಾಧ್ಯಕ್ಷ ರವಿಕೃಷ್ಣ ರೆಡ್ಡಿ ಆಗ್ರಹಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹತ್ಯೆ ಮಾಡಿದವರನ್ನು ಬಂಧಿಸಿದ್ದಾರೆ. ಆದರೆ ಹತ್ಯೆಯ ಹಿಂದೆ ಇದ್ದವರನ್ನು ಬಂಧಿಸಿಲ್ಲ. ತಮಗೆ ಸಂಬಂಧವಿಲ್ಲ ಎಂದಾ ದರೆ ಪಿ.ಟಿ. ಭರತ್ ಏಕೆ ತಲೆ ಮರೆಸಿಕೊಂಡಿದ್ದಾರೆ ? ಎಂದು ಅವರು ಪ್ರಶ್ನಿಸಿದ್ದಾರೆ. ವಿಜಯನಗರ ಜಿಲ್ಲಾ ಕೆಆರ್‌ಎಸ್ ಅಧ್ಯಕ್ಷ ಚಂದ್ರಶೇಖರ ದೊಡ್ಡಮನಿ, ಪ್ರಧಾನ ಕಾರ್ಯದರ್ಶಿ ಪಾಯ ಗಣೇಶ, ರಾಜ್ಯ ಜಂಟಿ ಕಾರ್ಯದರ್ಶಿ ಸೋಮಸುಂದರ್, ಅರವಿಂದ ಕೆ.ಬಿ. ನಾಯ್ಕ್ ಇನ್ನಿತರರಿದ್ದರು.

# ನಿಮ್ಮ ಪರವಾಗಿಯೂ ಮಠಾಧೀಶರು ಇರದಿದ್ದರೆ, ನೀವು ಶಾಸಕರೇ ಆಗುತ್ತಿರಲಿಲ್ಲ

ಓದುಗರ ಪತ್ರ

**ಮಾನ್ಯರೇ,**

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವ ಎಸ್.ಎ.ರವೀಂದ್ರನಾಥ್ ಅವರು ಮಠಾಧೀಶರ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆಗಳನ್ನು ವಿರೋಧಿಸುತ್ತಿರುವುದನ್ನು ನೋಡಿದರೆ ಹಾಸ್ಯಾಸ್ಪದವೆನಿಸುತ್ತದೆ.

ಶಾಮನೂರು ಶಿವಶಂಕರಪ್ಪನವರು ಕಾಂಗ್ರೆಸ್ ಪಕ್ಷದ ಶಾಸಕರು ಮಾತ್ರವಲ್ಲದೇ, ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾಗಿದ್ದು, ತಮ್ಮ ಸಮುದಾಯದ ಒಬ್ಬ ನಾಯಕನಿಗೆ ಆಗುತ್ತಿರುವ ಅನ್ಯಾಯವನ್ನು ಆ ಸಮುದಾಯದ ಅಧ್ಯಕ್ಷರಾಗಿ ವಿರೋಧಿಸುತ್ತಿದ್ದಾರೆಯೇ ವಿನಃ ಬೇರೆ ಕಾರಣದಿಂದಲ್ಲ, ಸಮುದಾಯದ ಅಧ್ಯಕ್ಷರಾಗಿ ಆ ಸಮುದಾಯದ ಏಳಿಗೆಗಾಗಿ ಶ್ರಮಿಸುವುದು ಅವರ ಕರ್ತವ್ಯವಾಗಿದ್ದು, ಅವರ ನಡೆ ಸಮುದಾಯದ ಹಿತದೃಷ್ಟಿಯಿಂದ ಸ್ವಾಗತಾರ್ಹ. ಇದನ್ನು ವಿರೋಧಿಸುತ್ತಿರುವ ಶಾಸಕರ ನಡೆ ನೋಡಿದರೆ ಅವರಿಗೆ ಸಮುದಾಯಕ್ಕಿಂತ ವೈಯಕ್ತಿಕ ಲಾಭವೇ ಮುಖ್ಯವೆನಿಸುತ್ತದೆ.

ಇನ್ನು ಮಠಾಧೀಶರ ನಡೆಯ ಬಗ್ಗೆ ಸಾರ್ವಜನಿಕರು ಮತ್ತು ಇತರ ನಾಯಕರು ವಿರೋಧಿಸುತ್ತಿರುವುದು ಏನೇ ಇರಲಿ. ಆದರೆ, ಮಠಾಧೀಶರ ಕೃಪಾ ಕಟಾಕ್ಷದಿಂದಲೇ ಶಾಸಕರಾಗಿ ರಾಜಕೀಯ ಏಳಿಗೆಯನ್ನು ಕಂಡ ರವೀಂದ್ರನಾಥ್ ಅವರು ಈಗ ಮಠಾಧೀಶರ ನಡೆಯನ್ನು ವಿರೋಧಿಸುತ್ತಿರುವುದು ಮಾತ್ರ ಹಾಸ್ಯಾಸ್ಪದವಲ್ಲದೇ ಬೇರೇನೂ ಅಲ್ಲ. ಅವರು 1994ರ ವಿಧಾನಸಭಾ ಚುನಾವಣೆಯ ಇತಿಹಾಸವನ್ನು ಮರೆತಂತಿದೆ.

1989ರ ವಿಧಾನಸಭಾ ಚುನಾವಣೆಯಲ್ಲಿ ಸಮಾಜದ ಹಿರಿಯರೆಲ್ಲರೂ ತೀರ್ಮಾನಿಸಿದ ಅಭ್ಯರ್ಥಿ ಎನ್.ಜಿ.ಪುಟ್ಟಸ್ವಾಮಿ ವಿರುದ್ಧ ತಾವು ಸ್ಪರ್ಧಿಸಿ 5030 ಮತಗಳನ್ನು ಪಡೆದಿದ್ದೀರಿ. ಆಗ ಎನ್.ಜಿ.ಪುಟ್ಟಸ್ವಾಮಿ ಅವರು 16763 ಮತಗಳನ್ನು ಪಡೆದಿದ್ದರು. ಆದರೂ ಮಠಾಧೀಶರು 1994 ರ ವಿಧಾನಸಭಾ ಚುನಾವಣೆಯಲ್ಲಿ ಹಿಂದಿನ ಚುನಾವಣೆಯಲ್ಲಿ ಕಡಿಮೆ ಮತ ಪಡೆದ ನಿಮಗೆ ಬಹಿರಂಗ ಬೆಂಬಲ ನೀಡಿ ಆಶೀರ್ವದಿಸದಿದ್ದರೆ ನೀವೆಲ್ಲಿ ಶಾಸಕರಾಗುತ್ತಿದ್ದಿರಿ ಅಲ್ಲವೇ ???? ಮಠಾಧೀಶರ ಮಾತಿಗೆ ಬೆಲೆಕೊಟ್ಟು ಚುನಾವಣೆಯಿಂದ ಹಿಂದೆ ಸರಿದ ಎನ್.ಜಿ.ಪುಟ್ಟಸ್ವಾಮಿ ಅವರು ಈಗ ರಾಜಕೀಯ ನೇಪಥ್ಯಕ್ಕೆ ಸರಿದಿದ್ದಾರೆ. ಆದರೆ, ಮಠಾಧೀಶರ ಆಶೀರ್ವಾದದಿಂದ ಶಾಸಕರಾಗಿ, ಸಚಿವರಾಗಿ ಅಧಿಕಾರ ಅನುಭವಿಸಿದ ನೀವು ಇಂದು ಮಠಗಳನ್ನು, ಮಠಾಧೀಶರುಗಳನ್ನೇ ದೂಷಿಸುತ್ತಿದ್ದೀರಾ...... ಎಂತಹ ವಿಪರ್ಯಾಸವಲ್ಲವೇ ????

**- ಕೆ.ಎಲ್.ಹರೀಶ್ ಬಸಾಪುರ.**

## ಅಸಂಘಟಿತ ಕಾರ್ಮಿಕರಿಗೆ ನೆರವು

ದಾವಣಗೆರೆ, ಜು.22- ಲಾಕ್‌ಡೌನ್ ಪರಿಣಾಮ ಆರ್ಥಿಕ ನಷ್ಟ ಅನುಭವಿಸಿದ ಅಸಂಘಟಿತ ಕಾರ್ಮಿಕ ವರ್ಗದವರಿಗೆ 2 ಸಾವಿರ ರೂ.ಗಳ ಒಂದು ಬಾರಿಯ ನೆರವಿನ ಪ್ಯಾಕೇಜ್ ಘೋಷಿಸಲಾಗಿದೆ.

ಅಗಸರು, ಕ್ಷೌರಿಕರು, ಗೃಹಕಾರ್ಮಿಕರು, (ಮನೆಗೆಲಸ), ಟೈಲರ್‌ಗಳು, ಮೆಕ್ಯಾನಿಕ್, ಚಿಂದಿ ಆಯುವವರು, ಹಮಾಲರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಮಂಡಕ್ಕಿ ಭಟ್ಟಿ ಕಾರ್ಮಿಕ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರಿಗೆ 2000 ರೂ.ಗಳ ಒಂದು ಬಾರಿಯ ನೆರವಿನ ವಿಶೇಷ ಪ್ಯಾಕೇಜ್ ಘೋಷಿಸಲಾ ಗಿರುತ್ತದೆ. ನೆರವಿನ ಮೊತ್ತ ಪಡೆಯಲು ಅಗತ್ಯ ದಾಖಲೆಗಳೊಂದಿಗೆ http://sevasindhu.karnataka.gov.in ಪೋರ್ಟಲ್ ನಲ್ಲಿ ದಿನಾಂಕ 31 ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾ ಗಿದೆ. ಹೆಚ್ಚಿನ ಮಾಹಿತಿಗೆ ಕಾರ್ಮಿಕ ಸಹಾಯವಾಣಿ 155214 ಅನ್ನು ಸಂಪರ್ಕಿಸಲು ಕಾರ್ಮಿಕ ಅಧಿಕಾರಿ ಇಬ್ರಾಹಿಂ ಸಾಬ್ ತಿಳಿಸಿದ್ದಾರೆ.

## ನರಗನಹಳ್ಳಿಯಲ್ಲಿ ಇಂದು ಉಚಿತ ಆರೋಗ್ಯ ತಪಾಸಣೆ ಶಿಬಿರ

ಸಪ್ತಗಿರಿ ಆಸ್ಪತ್ರೆ (ಬೆಂಗಳೂರು) ಹಾಗೂ ಕರ್ನಾಟಕ ತಾಂಡಾ ರಕ್ಷಣಾ ವೇದಿಕೆ ಸಂಯುಕ್ತಾಶ್ರಯದಲ್ಲಿ ವೇದಿಕೆ ರಾಜ್ಯಾಧ್ಯಕ್ಷ ಹೆಚ್.ಕೆ. ಲಿಂಗರಾಜ್ ಅವರ ಜನ್ಮದಿನದ ಪ್ರಯುಕ್ತ ಇಂದು ಮಧ್ಯಾಹ್ನ 3 ಗಂಟೆಗೆ ದಾವಣಗೆರೆ ತಾಲ್ಲೂಕಿನ ನರಗನಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಉಚಿತ ಹೃದಯ ರೋಗ, ನರರೋಗ, ಮೂತ್ರಪಿಂಡದ ಕಲ್ಲು ಹಾಗೂ ಕ್ಯಾನ್ಸರ್ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಆರೋಗ್ಯ ಶಿಬಿರದ ಮಾಹಿತಿಗಾಗಿ ವಿನೋದ್ ಕುಮಾರ್ (9731782463), ಆನಂದ್ (9035957039), ಸಂದೀಪ್ (9964909493) ಇವರನ್ನು ಸಂಪರ್ಕಿಸಬಹುದು.

## ಅಮ್ಮನನ್ನು ಕಳುಹಿಸುವ ಕಾರ್ಯಕ್ರಮ



ಹರಪನಹಳ್ಳಿ

ಹರಪನಹಳ್ಳಿ, ಜು.22- ಕೊರೊನಾ ಮಹಾಮಾರಿ ಸೇರಿದಂತೆ ಸಾಂಕ್ರಾಮಿಕ ರೋಗಗಳು ತೊಲಗಲಿ ಎಂದು ಕೋರಿ, ಪಟ್ಟಣದ ವಾಲ್ಮೀಕಿ ನಗರದಲ್ಲಿ ಅಮ್ಮನನ್ನು ಕಳುಹಿಸಲಾಯಿತು. ಈ ವೇಳೆ ವಾಲ್ಮೀಕಿ ನಗರದ 3 ಕೇರಿಯ ದೈವಸ್ಥರಾದ ಕೆ. ಅಂಜಿನಪ್ಪ, ಕೆ. ಹಾಲಪ್ಪ. ಎನ್. ದೊಡ್ಡಹಾಲಪ್ಪ, ಮಂಡಕ್ಕಿ ಸುರೇಶ. ವೈ. ಅಂಜಿನಪ್ಪ, ಕೆ. ಮಹಾಬಲೇಶ್, ಪೆನ್ನಪ್ಪ, ಯಲ್ಲಜ್ಜಿ ಕೊಟ್ರಪ್ಪ, ಎಸ್. ಬಸವರಾಜ, ಪಿ. ದುರುಗಪ್ಪ, ಆಲೂರು ಚೌಡಪ್ಪ, ತಳವಾರ ನಾಗಪ್ಪ ಇನ್ನಿತರರಿದ್ದರು.

## ನಾಳೆ ಹಡಪದ ಅಪ್ಪಣ್ಣ ಜಯಂತಿ

ದಾವಣಗೆರೆ,ಜು.22- ಶಿವಶರಣ ಹಡಪದ ಅಪ್ಪಣ್ಣ ಜಯಂತಿಯನ್ನು ನಾಡಿದ್ದು ದಿನಾಂಕ 24 ರ ಶನಿವಾರ ಬೆಳಗ್ಗೆ 11 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರಳ ಮತ್ತು ಸಾಂಕೇತಿಕವಾಗಿ ಆಚರಿಸಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

**ಸೈಟ್ ಮಾರಾಟಕ್ಕೆ**
1) J. H. ಪಟೇಲ್ 40x60, 30x55 ಪೂರ್ವ.
2) Dollars Colony 40x59 ಉತ್ತರ.
3) K.H.B. 40x60 ಪೂರ್ವ 30x40 ಉತ್ತರ.
ಕಿರಣ್ ಬೂಸ್ನೂರ್
98440-63409, 97315-63409

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಯಲ್ಲಿ Bsc/ MSc (CBZ) ಆಗಿರುವ ಯುವಕ/ಯುವತಿಯರು ಲ್ಯಾಬ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ
ಪ್ರತೀಕ್ ಎಂಟರ್ ಪ್ರೈಸಸ್
ನಾಗನೂರು ರಸ್ತೆ, ಶಾಮನೂರು, ದಾವಣಗೆರೆ.
ಮೊ: 94481 10287

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ.
ಸಂಬಳ 8000/-
ಊಟ, ರೂಂ ಉಚಿತ
97400 98047, 97400 98064

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಬೆಳಿಗ್ಗೆ, ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಮೊ.ನಂ. : 63641 33480, 70191 70201

**ಬೇಕಾಗಿದ್ದಾರೆ**
ಸೇಲ್ಸ್ ಗರ್ಲ್ಸ್, ಸೇಲ್ಸ್ ಮೆನ್, ಕಂಪ್ಯೂಟರ್ ಆಪರೇಟರ್
ಸಂಪರ್ಕಿಸಿ
87622 21697

**2 BHK ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿ ಪೂರ್ವ ಬಾಗಿಲು ಇರುವ 2BHK ಮನೆ ಸರಸ್ವತಿ ನಗರ, ವಿದ್ಯಾ ನಂದನ ಸ್ಕೂಲ್ ಹತ್ತಿರ ಬಾಡಿಗೆಗೆ ಇದೆ.
97405 04217

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 35 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ : ಪ್ರಕಾಶ ಟಿವಿ ಸೆಂಟರ್
ಮುರುಘರಾಜೇಂದ್ರ ಕಾಂಪ್ಲೆಕ್ಸ್, ಕುರುಬರ ಹಾಸ್ಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.

**JOB OPPORTUNITY**
We need a
Tally Faculty (Female)
Any Graduate with 0-2 years can send their CV within 24-7-21 to hardsoftdvg@gmail.com or
call us: 97312 18567

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಡಾಲರ್ಸ್ ಕಾಲೋನಿಯಲ್ಲಿ 30x57+56=1695 ಅಳತೆಯ ನಿವೇಶನ ಮಾರಾಟಕ್ಕಿದೆ. (ದಕ್ಷಿಣ ಮುಖ) 100% ಸರಿಯಾದ ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ಅಗತ್ಯ ದಾಖಲೆಗಳಿವೆ.
ಸಂಪರ್ಕಿಸಿ :
ಮೊ: 99006 37763

**ಬೇಕಾಗಿದ್ದಾರೆ**
ಮೆಡಿಕಲ್ ಸ್ಟೋರ್ ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
99725 23910

ಕ್ಯಾನ್ಸರ್, ಸಕ್ಕರೆ ಕಾಯಿಲೆ, ಡಿಪ್ರೆಷನ್ ಮೊದಲಾದ ಯಾವುದೇ ದೈಹಿಕ ಮತ್ತು ಮಾನಸಿಕ ಅನಾರೋಗ್ಯ ಸಮಸ್ಯೆಗಳ ಉಪಶಮನಕ್ಕಾಗಿ ಸಂಪರ್ಕಿಸಿ,
ಶ್ರೀ ಪರಿಮಳ ಹೀಲಿಂಗ್
7676750280

**ಬಾಡಿಗೆಗೆ ಇದೆ**
900 sqft ಇರುವ ಸೆಲ್ಲರ್ ಮಳಿಗೆ ಗೋಡೌನ್‌ಗೆ ಬಾಡಿಗೆಗೆ ಇದೆ.
KSRTC ಬಸ್ ಸ್ಟ್ಯಾಂಡ್ ಹಿಂಭಾಗ, ಚೌಡಮ್ಮ ದೇವಸ್ಥಾನದ ಎದುರು, ದಾವಣಗೆರೆ.
98808 19226
94486 66345

**WANTED**
Required Computer operator with experienced in computer worth with Good Salary ESI & PF
Age limit: Below 45
only Male candidate
SRINIVASA HONDA
88844 45242

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099

**ಬೇಕಾಗಿದ್ದಾರೆ**
ನುರಿತ ಕೋರಲ್ ಡ್ರಾ, ಡಿಸೈನಿಂಗ್, ಟೈಪಿಂಗ್ ಹಾಗೂ ಅಕೌಂಟ್ಸ್ ಅನುಭವವುಳ್ಳವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು.
ರಾಜ್ ಪ್ರಿಂಟರ್ಸ್, ಶಿವಪ್ಪಯ್ಯ ಸರ್ಕಲ್ ಹತ್ತಿರ, ದಾವಣಗೆರೆ.
99640 28818, 9742774340

**ಮನೆ ಬಾಡಿಗೆಗೆ/ಲೀಸ್‌ಗಿದೆ**
3 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 1ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ:
93410 12022

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟಾ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ. ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ಸುಬ್ರಮಣಿ ಆಗ್ರೋಟೆಕ್
ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
94484 39639, 63665 96479

**ಸೈಟು ಮಾರಾಟಕ್ಕಿದೆ**
ನಗರದ ಎಂ.ಸಿ.ಸಿ.'ಬಿ' ಬ್ಲಾಕ್ ನ ಬಾಪೂಜಿ ಹೈಸ್ಕೂಲ್ ಪಕ್ಕದಲ್ಲಿ ಹಾದುಹೋಗುವ 21ನೇ ಮುಖ್ಯ ರಸ್ತೆಗೆ 40x60 ಅಡಿ ಅಳತೆಯ ದಕ್ಷಿಣ ದಿಕ್ಕಿನ ಸೈಟು ಮಾರಾಟಕ್ಕಿದೆ. ಆಸಕ್ತರು ನೇರವಾಗಿ ಸಂಪರ್ಕಿಸಿ :
Mohan Real Estate Agencies
97424 34049

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**COMMERCIAL SITE FOR SALE**
Site No. 8, size 20x80 Gujari layout maganahally main road (double road) opposite, aqsa masjid complex near, JDS office, Davangere.
83106 39057

SSLC / PUC / Degree ಪಾಸ್/ಫೇಲ್ ಮುಂದೇನು?
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್-2ವರ್ಷ. ಕೇವಲ 6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಗಂಗೋತ್ರಿ ಕಮ್ಯುನಿಟಿ ಕಾಲೇಜ್ (ರಿ)
ಬಂಧನ್ ಬ್ಯಾಂಕ್ ಹತ್ತಿರ, ಲಾಯರ್ ರೋಡ್, ದಾವಣಗೆರೆ
86602 35013

**ತಕ್ಷಣ ಬೇಕಾಗಿದ್ದಾರೆ**
ಬಿಲ್ಲಿಂಗ್ ಆಪರೇಟರ್
ಕ್ಯಾಷಿಯರ್
ಲಿಕ್ಕರ್ ಪ್ಯಾರಡೈಸ್
ಶಾಮನೂರು ರಸ್ತೆ, ದಾವಣಗೆರೆ
ಸಂಪರ್ಕಿಸಿ: 70191 37858

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಹೆಸರು ಬದಲಾವಣೆ**
ನಾನು ಶ್ರೀ ಶೆಟ್ರ ಶ್ರೀಧರ ಬಿನ್ ಶೆಟ್ರ ಹಾಲೇಶಪ್ಪ 38 ವರ್ಷ ಶ್ರೀ ವೀರಭದ್ರೇಶ್ವರ ನಿಲಯ, 1ನೇ ಕ್ರಾಸ್ ಚಾಮುಂಡೇಶ್ವರಿ ಟಾಕೀಸ್ ಹಿಂಭಾಗ, ಆಂಜನೇಯ ಬಡಾವಣೆ, ದಾವಣಗೆರೆ ವಾಸಿಯಾದ ನಾನು ನಮಗೆ ದಿನಾಂಕ 30.04.2016 ರಂದು ಸಂದೀಪ ನರ್ಸಿಂಗ್ ಹೋಂ ದಾವಣಗೆರೆಯಲ್ಲಿ ಗಂಡು ಮಗುವಿಗೆ ಜನ್ಮ ನೀಡಿದ್ದು ಸದರಿ ಜನನ ದಾಖಲೆಯಲ್ಲಿ ಶೆಟ್ರ ಗಣೇಶ್ (SHETRA GANESH) ಎಂಬುವುದರ ಬದಲು ಗಣೇಶ್ ಎಸ್ (Ganesh S) ಎಂದು ತಪ್ಪಾಗಿ ನಮೂದಾಗಿದೆ. ಆದರಿಂದ ದಿನಾಂಕ 19.07.2021 ರಂದು ನೋಟರಿ ದಾವಣಗೆರೆಯ ಮುಂದೆ ನನ್ನ ಮಗನ ಹೆಸರು ಶೆಟ್ರ ಗಣೇಶ್ ಸರಿಯೆಂದು ಪ್ರಮಾಣೀಕರಿಸಿದ್ದೇನೆ.
ಸಹಿ: ಶೆಟ್ರ ಶ್ರೀಧರ

ರೈತ ಬಾಂಧವರೇ ಮೆಕ್ಕೆಜೋಳದ ಬೆಳೆಯಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯಲು ಮತ್ತು ಮೆಕ್ಕೆಜೋಳದ ಬೆಳೆಯ ರೋಗಬಾಧೆ ಮತ್ತು ಕೀಟಗಳಿಗೆ ಯಾವ ಔಷಧಿಯನ್ನು ಸಿಂಪಡಿಸಬೇಕೆಂದು ಹೆಚ್ಚಿನ ಮಾಹಿತಿಯನ್ನು ಕೊಡಲಾಗುವುದು ಸಂಪರ್ಕಿಸಿ
ಸುನಿಲ್: 98451 04109

**GANGOTRI PLAZA COMMERCIAL BUILDING FOR RENT**
@ Mama's Joint Road, Opp. Shilpa Diagnostic, MCC 'B' Block, Davangere.
1st Floor 1600 Sq.ft.
2nd Floor 1600 Sq.ft
Basement 1300 Sq.ft
Lift facility available.
NORTH FACE BUILDING
98455 55098

# ಕೈಗಾರಿಕಾ ಸ್ನೇಹಿ ತೆರಿಗೆ ಸುಧಾರಣೆಗೆ ಅಂತಿಮ ತೀರ್ಮಾನ: ಸಚಿವ ಶೆಟ್ಟರ್

ಬೆಂಗಳೂರು, ಜು. 22 - ರಾಜ್ಯದಲ್ಲಿ ಕೈಗಾರಿಕಾ ಸ್ನೇಹಿ ತೆರಿಗೆ ಸುಧಾರಣೆಗೆ ಮುಂದಾಗಿದ್ದು, ಈ ಬಗ್ಗೆ ಶೀಘ್ರ ಅಂತಿಮ ತೀರ್ಮಾನ ಕೈಗೊಳ್ಳುವಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಧಾನಸೌಧದಲ್ಲಿ ಪೌರಾಡಳಿತ ಸಚಿವರಾದ ಎಂ.ಟಿ.ಬಿ. ನಾಗರಾಜ್, ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ್ ಹಾಗೂ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಅವರ ಅಧ್ಯಕ್ಷತೆಯಲ್ಲಿ ಎಲ್ಲಾ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ರಾಜ್ಯದ ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಭೆಯನ್ನು ನಡೆಸಲಾಯಿತು.

ಸಭೆಯಲ್ಲಿ ಎಲ್ಲಾ ಕೈಗಾರಿಕಾ ಸಂಸ್ಥೆಗಳ ಪ್ರತಿನಿಧಿಗಳು ತಮ್ಮ ಸಮಸ್ಯೆಗಳನ್ನು ತಿಳಿಸಿದರು. ನಂತರ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಮಾತನಾಡಿ, ಕೈಗಾರಿಕೆಗಳ ಮೇಲೆ ಹಾಕಲಾಗುತ್ತಿರುವ ತೆರಿಗೆಗಳು ಬಹಳ ಹೆಚ್ಚಾಗಿವೆ. ಖಾಲಿ ಇರುವ ಜಾಗದ ಮೇಲೂ ಬಹಳಷ್ಟು ತೆರಿಗೆ ಹಾಕಲಾಗುತ್ತಿದೆ. ಅಲ್ಲದೆ, ತೆರಿಗೆ ಪದ್ಧತಿಯಲ್ಲಿ ರಾಜ್ಯಾದ್ಯಂತ ಪಾರದರ್ಶಕ ಹಾಗೂ ಒಂದೇ ರೀತಿಯ ತೆರಿಗೆ ಪದ್ದತಿ ಅಳಡಿಸಿಕೊಳ್ಳುವುದು ಬಹಳ ಅವಶ್ಯಕ. ಈ ಹಿನ್ನೆಲೆಯಲ್ಲಿ ಇಂದು ಮೂವರು ಸಚಿವರ ಉಪಸ್ಥಿತಿಯಲ್ಲಿ ಸಭೆ ನಡೆಸಲಾಯಿತು ಎಂದು ತಿಳಿಸಿದರು.

ಸಭೆಯಲ್ಲಿ ಎಲ್ಲಾ ಸಮಸ್ಯೆಗಳ ಬಗ್ಗೆಯೂ ಶೀಘ್ರವಾಗಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು. ರಾಜ್ಯದಲ್ಲಿ ಕೈಗಾರಿಕಾ ಸ್ನೇಹಿ ತೆರಿಗೆ ಪದ್ದತಿಯ ಅನುಷ್ಠಾನಕ್ಕೆ ಅಗತ್ಯವಿರುವ ಸುಧಾರಣೆಗಳನ್ನು ಶೀಘ್ರ ಕೈಗೊಳ್ಳುವಂತೆ ಸಚಿವರು ಸೂಚನೆ ನೀಡಿದರು.

ನಗರಾಭಿವೃದ್ದಿ ಸಚಿವ ಬಿ ಎ ಬಸವರಾಜ್ ಮಾತನಾಡಿ, ಕಳೆದ ಹಲವಾರು ಸಭೆಗಳಲ್ಲಿ ಚರ್ಚೆ ನಡೆಸಿರುವಂತೆ ಕೈಗಾರಿಕೆಗಳಿಗೆ ಪ್ರತ್ಯೇಕವಾಗಿ ಇನ್ನೊಂದು ಸ್ಲ್ಯಾಬನ್ನು ರಚಿಸುವ ನಿಟ್ಟಿನಲ್ಲಿ, ಹಳೆಯ ತೆರಿಗೆಯನ್ನು ಒನ್ ಟೈಂ ಸೆಟ್ಲ್‌ಮೆಂಟ್ ಬಗ್ಗೆ ಹಾಗೂ ತೆರಿಗೆಯಲ್ಲಿ ರಿಬೇಟ್ ನೀಡುವ ನಿಟ್ಟಿನಲ್ಲಿ ಅಂತಿಮ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಇದನ್ನು ಮುಂದಿನ ಸಚಿವ ಸಂಪುಟ ಸಭೆಯ ಮುಂದಿಡಲಾಗುವುದು ಎಂದು ಹೇಳಿದರು.

ಪೌರಾಡಳಿತ ಸಚಿವ ಎಂ.ಟಿ.ಬಿ ನಾಗರಾಜ್ ಮಾತನಾಡಿ, ಕೈಗಾರಿಕೆಗಳಿಗೆ ಕೊರೊನಾ ಸಾಂಕ್ರಾಮಿಕದ ಸಂದರ್ಭದಲ್ಲಿ ತೀವ್ರ ತೊಂದರೆ ಆಗಿದೆ. ಇದನ್ನು ಪರಿಹರಿಸುವ ನಿಟ್ಟಿನಲ್ಲಿ ಅಗತ್ಯವಿರುವಂತಹ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು.

## ರಾಣೇಬೆನ್ನೂರಿನಲ್ಲಿ ಜಪ ಯಜ್ಞ

ರಾಣೇಬೆನ್ನೂರು, ಜು.22- ಇಲ್ಲಿನ ವಿವೇಕಾನಂದಾಶ್ರಮದಲ್ಲಿ ನಾಡಿದ್ದು ದಿನಾಂಕ 24 ರ ಗುರು ಪೂರ್ಣಿಮೆಯಂದು ಜಪ ಯಜ್ಞ ನಡೆಯಲಿದೆ.

# ಸರ್ಕಾರದ ಎಲ್ಲಾ ಅಂಗಗಳು ರೈತರ ಮೇಲೆ ನಿಂತಿವೆ




**ನರಗುಂದ ರೈತ ಬಂಡಾಯಕ್ಕೆ 41ನೇ ವರ್ಷ ಪೂರೈಸಿದ ಸ್ಮರಣಾರ್ಥ ನಡೆದ ಕಾರ್ಯಕ್ರಮದಲ್ಲಿ ಹಿರಿಯ ವಕೀಲ ಎಲ್.ಹೆಚ್.ಅರುಣ್ ಕುಮಾರ್**

ದಾವಣಗೆರೆ, ಜು.22- ರೈತರು ನಾಶವಾದರೆ ಈ ದೇಶವೇ ನಾಶವಾದಂತೆ. ರೈತ ಕುಲ ಉಳಿದರೆ ಮಾತ್ರ ದೇಶದ ಉಳಿವು. ಸರ್ಕಾರದ ಎಲ್ಲಾ ಅಂಗಗಳು ರೈತರ ಮೇಲೆ ನಿಂತಿವೆ ಎಂದು ಹಿರಿಯ ವಕೀಲ ಎಲ್.ಹೆಚ್. ಅರುಣ್ ಕುಮಾರ್ ಅಭಿಪ್ರಾಯಪಟ್ಟರು.

ನಗರದ ನಗರ ಪಾಲಿಕೆ ಆವರಣದಲ್ಲಿ ಸಂಯುಕ್ತ ಹೋರಾಟ-ಕರ್ನಾಟಕ ದಾವಣಗೆರೆ ಸಮಿತಿಯಿಂದ ನರಗುಂದ ರೈತ ಬಂಡಾಯಕ್ಕೆ 41ನೇ ವರ್ಷ ಪೂರೈಸಿದ್ದ ಪ್ರಯುಕ್ತ ಇಂದು ಆಯೋಜಿಸಲಾಗಿದ್ದ ಸ್ಮರಣಾರ್ಥ ಸಭೆಯಲ್ಲಿ ಪಾಲ್ಗೊಂಡು ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ರೈತ ಚಳುವಳಿಯಲ್ಲಿ ರಾಜ್ಯದ ನರಗುಂದ ರೈತ ಚಳುವಳಿ ಒಂದು ಮೈಲಿಗಲ್ಲು. ಆ ಚಳುವಳಿಯ ನಂತರವೇ ದೇಶದಲ್ಲಿ ಹಲವಾರು ರೈತ ಸಂಘಟನೆಗಳು ಹುಟ್ಟಿಕೊಂಡವು. ನಂತರ ರೈತರ ಧ್ವನಿಗೆ ಶಕ್ತಿಯಾಯಿತು. ಅಂತೆಯೇ ದೆಹಲಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದು ಅದನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದರು.

ಕಬ್ಬು ಬೆಳೆಗಾರರ ಸಂಘದ ತೇಜಸ್ವಿ ಪಟೇಲ್ ಮಾತನಾಡಿ, ದೇಶ ಆರ್ಥಿಕವಾಗಿ ದಿವಾಳಿಯಾದರೆ ಪುನರುಜ್ಜೀವನ ಮಾಡಬಹುದು. ಆದರೆ ಮಾನಸಿಕವಾಗಿ ದಿವಾಳಿಯಾದರೆ ಪುನರುಜ್ಜೀವನ ಆಗುವುದು ಕಷ್ಟ. ಈಗ ನಮ್ಮ ದೇಶವು ಮಾನಸಿಕವಾಗಿ ದಿವಾಳಿಯಾಗಿದೆ. ಸರ್ಕಾರಗಳು ಧರ್ಮದ ಲೇಪನಕೊಟ್ಟು ತಾನೇ ಮಾಡಿದ್ದು ಸರಿ ಎಂದು ದರ್ಪ ತೋರಿಸುತ್ತಿವೆ.

'ಯಾವುದೇ ದೇಶವಾಗಲೀ ಧರ್ಮಾಧರಿತ ಆಡಳಿತ ನಡೆಸಿದರೆ ಬಹಳ ದಿನ ಉಳಿಯುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಪೂರ್ವದ ಹೋರಾಟಗಳು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವು. ನಂತರದ ತುರ್ತು ಪರಿಸ್ಥಿತಿಯಲ್ಲಿ ಹೋರಾಟಗಳು ಆಗಿನ ಸರ್ಕಾರವನ್ನೇ ಎಚ್ಚರಿಸಿದವು. ಇತ್ತ ನವಲಗುಂದ, ನರಗುಂದ ಚಳುವಳಿಯಲ್ಲಿ ರೈತರನ್ನು ಕಡೆಗಣಿಸಿದ್ದಕ್ಕೆ ಸರ್ಕಾರವನ್ನೇ ಕಿತ್ತು ಹಾಕಲಾಯಿತು. ರೈತರು, ದಲಿತರು, ಕಾರ್ಮಿಕರನ್ನು ಕಡೆಗಣಿಸಿದರೆ ಯಾವುದೇ ಸರ್ಕಾರಗಳು ಉಳಿಯುವುದಿಲ್ಲ ಎನ್ನುವುದಕ್ಕೆ ಹಲವಾರು ಉದಾಹರಣೆಗಳಿವೆ ಎಂದು ಹೇಳಿದರು.

ಹಿರಿಯ ವಕೀಲ ಅನಿಷ್ ಪಾಷಾ ಮಾತನಾಡಿ, ದೇಶದಲ್ಲಿ ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ರೈತ ಪ್ರತಿ ಹಂತದಲ್ಲೂ ತುಳಿತಕ್ಕೆ ಒಳಗಾಗುತ್ತಿದ್ದಾನೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ವೇಳೆ ಕಾರ್ಮಿಕ ಮುಖಂಡರಾದ ಆವರಗೆರೆ ಹೆಚ್.ಜಿ. ಉಮೇಶ್, ಪಿ.ಕೆ. ಲಿಂಗರಾಜು, ಭೀಮಾರೆಡ್ಡಿ, ಸತೀಶ್ ಅರವಿಂದ್, ರೇಣುಕಾ ಯಲ್ಲಮ್ಮ, ಸಾವಿತ್ರಮ್ಮ, ಶ್ರೀನಿವಾಸ್, ಅಂಜಿನಪ್ಪ ಪೂಜಾರ್, ನರೇಗಾ ರಂಗನಾಥ್, ಐರಣಿ ಚಂದ್ರು, ಮಂಜುನಾಥ್ ಕೈದಾಳೆ, ತಿಪ್ಪೇಸ್ವಾಮಿ ಸೇರಿದಂತೆ ಎಐಕೆಎಸ್, ಕೆಪಿಆರ್‌ರೆಸ್, ಆರ್‌ಕೆಎಸ್, ಕಬ್ಬು ಬೆಳೆಗಾರರ ಸಂಘದ ಮುಖಂಡರು ಇದ್ದರು.

# ತಂದೆಯ ಸಾವಿನ ದುಃಖದ ನಡುವೆ ಪರೀಕ್ಷೆ ಬರೆದ ಮಗಳು



ಕೂಡ್ಲಿಗಿ, ಜು.22- ತಂದೆ ಬ್ಲ್ಯಾಕ್ ಫಂಗಸ್‌ನಿಂದ ಬಳ್ಳಾರಿ ವಿಮ್ಸ್‌ನಲ್ಲಿ ಕಳೆದ ರಾತ್ರಿ ಮೃತಪಟ್ಟರೆ, ತಂದೆಯನ್ನು ಕಳೆದುಕೊಂಡ ಮಗಳು ದುಃಖದ ಮಡುವಿನಲ್ಲೂ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದ ಘಟನೆ ನಡೆದಿದೆ.

ತಾಲ್ಲೂಕಿನ ಹೊಸಹಟ್ಟಿಯ ಸಣ್ಣಓಬಯ್ಯ (51) ಬ್ಲ್ಯಾಕ್ ಫಂಗಸ್‌ಗೆ ಬಲಿಯಾದ ತಂದೆಯಾದರೆ, ತಂದೆಯ ಸಾವಿನ ದುಃಖದಲ್ಲೂ ಚಂದನ ಎಂಬ ಮಗಳು ಇಂದು ಕೂಡ್ಲಿಗಿಯ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದಳು. ಜೂನ್ 1 ರಂದು ಬ್ಲ್ಯಾಕ್ ಫಂಗಸ್ ಇರುವ ಬಗ್ಗೆ ವೈದ್ಯರ ಸಲಹೆಯಂತೆ ಸಣ್ಣ ಓಬಯ್ಯನನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಮೊನ್ನೆ ಸಣ್ಣಓಬಯ್ಯ ಮೃತಪಟ್ಟಿದ್ದರು.

4 ಜನ ಮಕ್ಕಳಲ್ಲಿ ಕೊನೆಯ ಮಗಳಾದ ಚಂದನಾ ಕಳೆದೆರಡು ದಿನದ ಹಿಂದೆ ಪರೀಕ್ಷೆ ಎದುರಿಸಿದ್ದು, ಗುರುವಾರ ಸಹ ಪರೀಕ್ಷೆ ಬರೆಯಲು ಕಳೆದ ರಾತ್ರಿ ಓದಿನ ತಯಾರಿಯಲ್ಲಿರುವಾಗ ತಂದೆ ಸಾವಿನ ಸುದ್ದಿ ಬರಸಿಡಿಲು ಬಡಿದಂತಾಗಿತ್ತು. ಆದರೂ ದುಃಖದ ನಡುವೆಯೇ ಪರೀಕ್ಷೆ ಬರೆದು ಬಂದು, ನಂತರ ತಂದೆಯ ಅಂತ್ಯ ಸಂಸ್ಕಾರದಲ್ಲಿ ಭಾಗಿಯಾಗಿದ್ದಾಳೆ.

# ಅಂಗನವಾಡಿ ಸಹಾಯಕಿ ಹುದ್ದೆ ನೇಮಕಾತಿಯಲ್ಲಿ ಎಸ್ಸಿ ಮಹಿಳೆಗೆ ಅನ್ಯಾಯ

ದಾವಣಗೆರೆ, ಜು.22- ಹರಿಹರ ತಾಲ್ಲೂಕು ಹನಗವಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಅಂಗನವಾಡಿ ಕೇಂದ್ರವನ್ನು ಪರಿಶಿಷ್ಟ ಜಾತಿ ಮೀಸಲಾತಿ ಬದಲಾಯಿಸಿ, ಸಾಮಾನ್ಯ ಮೀಸಲಾತಿ ಮಾಡುವ ಮೂಲಕ ಅನ್ಯಾಯ ಮಾಡಲಾಗಿದೆ ಎಂದು ಬಿ.ಎಸ್.ಪಿ. ಜಿಲ್ಲಾಧ್ಯಕ್ಷ ಬಿ. ಹನುಮಂತಪ್ಪ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹನಗವಾಡಿಯ ವಾರ್ಡ್ ನಂ.1 ರಲ್ಲಿ ಇರುವ ಅಂಗನವಾಡಿ (ಡಿ ಕೇಂದ್ರ) ಕೇಂದ್ರದಲ್ಲಿ ಸಹಾಯಕಿಯಾಗಿ ಛಲವಾದಿ ಸಮಾಜದ ಮಹಿಳೆ ಎಂ.ಸಿ. ಸುಧಾ ಅವರು 2014 ರಿಂದ 31-07-2021 ರವರೆಗೂ ಕರ್ತವ್ಯ ನಿರ್ವಹಿಸುತ್ತಾ ಬಂದಿದ್ದಾರೆ. ಕಳೆದ ಆರೇಳು ವರ್ಷಗಳಿಂದ ವೇತನವಿಲ್ಲದೇ ದುಡಿಸಿಕೊಳ್ಳಲಾಗಿದೆ ಎಂದು ದೂರಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಎಂ.ಸಿ. ಸುಧಾ, ಎ.ಹೆಚ್. ಮಂಜುನಾಥ್, ಆರ್. ಶ್ರೀನಿವಾಸ್ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಪಿಡಿಓಗಳಿಗೆ ಕಾರ್ಯಾಗಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಹಾಗೂ ಜಿಲ್ಲಾ ಪಂಚಾಯತಿ ಇವರುಗಳ ಸಹಯೋಗದಲ್ಲಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳ ನೂತನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಅಭಿವೃದ್ಧಿ ವಿಷಯಗಳ ಕುರಿತು ಕಾರ್ಯಾಗಾರವು ಇಂದು ಬೆಳಿಗ್ಗೆ 10.30 ಗಂಟೆಗೆ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿ ತಿಳಿಸಿದ್ದಾರೆ.


# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್.ಟಿ.ಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್.ಪಿ.ಎಸ್ ನಗರ 2ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ, ಶಿವಾಲಿ ಚಿತ್ರ ಮಂದಿರದ ಅಕ್ಕ ಪಕ್ಕ ಹಾಗೂ ಟೀಚರ್ಸ್ ಕಾಲೋನಿ ಹಾಗೂ ಸುತ್ತಮುತ್ತಲಿನ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ನಾಳೆ ಸಾಮೂಹಿಕ ಗಾಯತ್ರಿ ಪೂಜೆ

ದಾವಣಗೆರೆ, ಜು.22- ನಗರದ ಶ್ರೀ ಗಾಯತ್ರಿ ಪರಿವಾರದಿಂದ ಗುರು ಪೌರ್ಣಿಮೆ ಅಂಗವಾಗಿ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಶ್ರೀ ಗಾಯತ್ರಿ ಪೂಜೆ, ನಾಡಿದ್ದು ದಿನಾಂಕ 24 ರ ಶನಿವಾರ ಬೆಳಿಗ್ಗೆ 7ಕ್ಕೆ ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಸಾಮೂಹಿಕವಾಗಿ ನಡೆಯಲಿದೆ.

# ಕೊಂಡಜ್ಜಿ ಪರೀಕ್ಷಾ ಕೊಠಡಿಗೆ ಜಿಲ್ಲಾಧಿಕಾರಿ ಭೇಟಿ



ಹರಿಹರ, ಜು.22- ಕೊಂಡಜ್ಜಿ ಸರ್ಕಾರಿ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೊಠಡಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಬಿಇಓ ಸಿದ್ದಪ್ಪ ಸೇರಿದಂತೆ, ಇತರೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಜಿಲ್ಲಾಧಿಕಾರಿಗಳು ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯ ತುಂಬುವ ಮಾತಗಳನ್ನಾಡುವುದರ ಜೊತೆಗೆ ನೀವು ಇಂದು ಏಕಾಗ್ರತೆಯಿಂದ ಪರೀಕ್ಷೆಯನ್ನು ಬರೆಯುವುದರಿಂದ ನಿಮಗೆ ಹೆಚ್ಚಿನ ಅಂಕಗಳು ಲಭಿಸಿ, ನಿಮ್ಮ ಮುಂದಿನ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಹೇಳಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು.

ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಒಟ್ಟು 3123 ವಿದ್ಯಾರ್ಥಿಗಳಲ್ಲಿ ಇಬ್ಬರು ವಿದ್ಯಾರ್ಥಿಗಳು ಗೈರು ಆಗಿದ್ದು, ಉಳಿದ 3121 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘದ ಖಜಾಂಚಿ ಶಿವಮೂರ್ತಿ, ತಾಲ್ಲೂಕು ಆಡಳಿತದ ಕಿರಣ್ ಮತ್ತಿತರರು ಇನ್ನಿತರರಿದ್ದರು.

# ಪ್ಯಾಕೇಜ್ ಟೆಂಡರ್ ರದ್ದುಪಡಿಸುವಂತೆ ಸ್ಥಳೀಯ ಗುತ್ತಿಗೆದಾರರ ಒತ್ತಾಯ

ದಾವಣಗೆರೆ, ಜು.22- ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ ಅಡಿಯಲ್ಲಿ ಕರೆದಿರುವ ಪ್ಯಾಕೇಜ್ ಟೆಂಡರ್ ರದ್ದುಪಡಿಸುವಂತೆ ಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎನ್. ಸಿದ್ಧರಾಮಪ್ಪ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ಯಾಕೇಜ್ ಟೆಂಡರ್ ಕರೆಯುವುದರಿಂದ ಸ್ಥಳೀಯ ಗುತ್ತಿಗೆದಾರರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಬ್ಲಾಕ್ ಮನಿ ಇರುವರಿಗೆ, ಬಂಡವಾಳಶಾಹಿಗಳಿಗೆ ಮಾತ್ರ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಸ್ಥಳೀಯ ಗುತ್ತಿಗೆದಾರರಿಗೆ ಯಾವುದೇ ಕಾಮಗಾರಿಗಳು ಸಿಗುವುದಿಲ್ಲ ಎಂದರು.

50 ಲಕ್ಷ ರೂ.ಗಳವರೆಗೆ ಎಸ್ಸಿ, ಎಸ್ಟಿ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ಕೊಡಬೇಕೆಂಬ ರಾಜ್ಯ ಸರ್ಕಾರದ ಆದೇಶವಿದೆ. ಇದನ್ನು ತಪ್ಪಿಸುವ ಸಲುವಾಗಿ 6 ರಿಂದ 9 ಕೋಟಿ ರೂ. ಪ್ಯಾಕೇಜ್ ಟೆಂಡರ್ ಕರೆದಿದ್ದಾರೆ. ಇದು ಅವೈಜ್ಞಾನಿಕವಾಗಿದ್ದು, ಉದಾಹರಣೆಗೆ ಪ್ಯಾಕೇಜ್ 3 ರಲ್ಲಿ 6 ವಾರ್ಡ್‌ಗಳನ್ನು ಸೇರಿಸಿ ಒಟ್ಟು 12 ಸಣ್ಣಪುಟ್ಟ ಕಾಮಗಾರಿಗಳಿಗೆ ಟೆಂಡರ್ ಕರೆದಿರುತ್ತಾರೆ. ಈ ಪ್ಯಾಕೇಜ್ ನಲ್ಲಿ 50 ಲಕ್ಷದೊಳಗಿನ ಮೊತ್ತಕ್ಕೆ ಟೆಂಡರ್ ಕರೆದಿದ್ದರೆ, ಸ್ಥಳೀಯ 15 ರಿಂದ 20 ಗುತ್ತಿಗೆದಾರರಿಗೆ ಕಾಮಗಾರಿಗಳು ಸಿಗುತ್ತಿದ್ದವು. ತ್ವರಿತಗತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿತ್ತು ಎಂದು ಮಾಹಿತಿ ನೀಡಿದರು.

ಜನಪ್ರತಿನಿಧಿಗಳು ಸ್ಥಳೀಯ ಗುತ್ತಿಗೆದಾರರ ಬಗ್ಗೆ ಗಮನ ಹರಿಸಬೇಕು. ದೊಡ್ಡ ದೊಡ್ಡ ಮೊತ್ತದ ಪ್ಯಾಕೇಜ್ ಗಳನ್ನು ರದ್ದುಗೊಳಿಸಿ, ಸಣ್ಣ ಮೊತ್ತದ ಅಂದರೆ 10 ರಿಂದ 50 ಲಕ್ಷದವರೆಗಿನ ಕಾಮಗಾರಿಗಳಿಗೆ ಟೆಂಡರ್ ಕರೆಯುವಂತೆ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ವಿ. ಶ್ರೀನಿವಾಸ್, ಎಸ್.ಹೆಚ್. ಶಿವಣ್ಣ, ಕೆ. ಶಿವಕುಮಾರ್, ಡಿ.ಎನ್. ಚಂದ್ರಶೇಖರ್, ಹೆಚ್. ಷಣ್ಮುಖಪ್ಪ, ಡಿ. ಬಸವರಾಜಪ್ಪ, ಬಿ. ರಮೇಶ್, ಈ. ರುದ್ರೇಶ್, ಡಿ. ಈಶ್ವರ್, ಜಯ್ಯಣ್ಣ, ಉದಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಕೆ.ಎಸ್. ಈಶ್ವರಪ್ಪಗೆ ಮುಖ್ಯಮಂತ್ರಿ ಸ್ಥಾನಕ್ಕೆ ಒತ್ತಾಯ

ದಾವಣಗೆರೆ, ಜು.22- ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಾಯಿಸುವುದಾದರೆ ಹಿಂದುಳಿದ ವರ್ಗದ ನಾಯಕ ಕೆ.ಎಸ್. ಈಶ್ವರಪ್ಪ ಅವರಿಗೆ ಮುಖ್ಯಮಂತ್ರಿ ಸ್ಥಾನವನ್ನು ಕೊಡುವಂತೆ ಜಿಲ್ಲಾ ಹಾಲುಮತ ಮಹಾಸಭಾ ಒತ್ತಾಯಿಸಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾ ರಾಜ್ಯ ಸಂಚಾಲಕ ರಾಜು ಮೌರ್ಯ ಅವರು, ಈಗಾಗಲೇ ಲಿಂಗಾಯತ, ಒಕ್ಕಲಿಗ ಸಮುದಾಯಕ್ಕೆ ಪ್ರಾತಿನಿಧ್ಯತೆ ನೀಡಲಾಗಿದೆ. ಅದರಂತೆ ರಾಜ್ಯದ ಕುರುಬ ಸಮುದಾಯಕ್ಕೂ ಪ್ರಾತಿನಿಧ್ಯತೆ ನೀಡುವ ಮೂಲಕ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಿ. ವೀರಣ್ಣ ಹಾಲೇಕಲ್ಲು, ದೀಟೂರು ಚಂದ್ರು, ಘನರಾಜ್, ಎಸ್.ಎಂ. ಸಿದ್ಧಲಿಂಗಪ್ಪ, ಜಿ.ಟಿ. ಪರಮೇಶ್, ಸಲ್ಲಳ್ಳಿ ಹನುಮಂತಪ್ಪ, ಕಾಂತೇಶ್ ಮತ್ತಿತರರಿದ್ದರು.

# ಮರೆಯುವ ಹಕ್ಕಿಗಾಗಿ ಅರ್ಜಿ

**(3ನೇ ಪುಟದಿಂದ)** ಎಂದು ಕೌಶಿಕ್ ಪರ ವಕೀಲ ಅಮಿತ್ ಜಾರ್ಜ್ ವಾದ ಮಂಡಿ ಸಿದ್ದಾರೆ. ಕೌಶಿಕ್ ಕುರಿತು ಅಂತರ್ಜಾಲ ದಲ್ಲಿ ಶೋಧಿಸಿದ ಸಂದರ್ಭದಲ್ಲಿ ಅವರ ಕುರಿತ ವಿಡಿಯೋ, ಫೋಟೋ ಹಾಗೂ ಹಿಂದಿನ ಜೀವನದ ಮಾಹಿತಿ ದೊರೆಯು ತ್ತಿದೆ. ಇವೆಲ್ಲವನ್ನೂ ಕಿತ್ತು ಹಾಕಬೇಕು ಎಂದು ಜಾರ್ಜ್ ಮನವಿಯಲ್ಲಿ ಕೇಳಿದ್ದಾರೆ. ಗೂಗಲ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ಅರವಿಂದ್ ನಿಗಮ್, ಮರೆಯುವ ಹಕ್ಕು ಈ ದೇಶದಲ್ಲಿ ಇನ್ನೂ ಕಾನೂನಾಗಿಲ್ಲ ಎಂದಿದ್ದಾರೆ.

# ಮನೆಗಳ್ಳತನ : ಚಿನ್ನಾಭರಣ, ನಗದು ಕಳ್ಳತನ

ದಾವಣಗೆರೆ, ಜು.22- ಮನೆಗೆ ಕನ್ನ ಹಾಕಿರುವ ಕಳ್ಳರು 84 ಸಾವಿರ ರೂ. ಮೌಲ್ಯದ ಚಿನ್ನಾಭರಣ, 17 ಸಾವಿರ ನಗದು ಸೇರಿ ಒಟ್ಟು ಒಂದು ಲಕ್ಷದ ಐದು ಸಾವಿರದಷ್ಟು ಕಳವು ಮಾಡಿರುವ ಘಟನೆ ಹದಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಇದೇ ದಿನಾಂಕ 20 ರಂದು ಅರುಣ್‌ಕುಮಾರ್ ಅವರ ತಾಯಿ ಗಾಯತ್ರಿ ಹಿರಿಯೂರಿಗೆ ಹೋಗಿದ್ದು, ಆತನ ತಂದೆಯು ಲೋಕಿಕೆರೆಯ ಮನೆಯ ಬೀಗವನ್ನು ಹಾಕಿಕೊಂಡು ದಾವಣಗೆರೆಗೆ ಬಂದಿದ್ದರು. ಈ ಸಮಯದಲ್ಲಿ ಬೀಗ ಹಾಕಿದ್ದ ಮನೆಯ ಮೇಲ್ಛಾವಣೆಯ ತಗಡನ್ನು ತೆಗೆದು ಅದರೊಳಗಿಳಿದು ಒಳನುಗ್ಗಿರುವ ಕಳ್ಳರು ಚಿನ್ನಾಭರಣ, ನಗದು ದೋಚಿ ಪರಾರಿಯಾಗಿದ್ದಾರೆ.

# ಬದಲಾವಣೆ ಸೂಕ್ತವಲ್ಲ


**(3ನೇ ಪುಟದಿಂದ)** ನಿರ್ಧಾರಕ್ಕೆ ನಾವೂ ಕೂಡ ಬದ್ದರಾಗಿದ್ದೇವೆ ಎಂದರು.

ವರಿಷ್ಠರು ಬಿಎಸ್‌ವೈರಿಗೆ ರಾಜೀನಾಮೆ ಕೊಡುವಂತೆ ಹೇಳಿದ್ದಾರೋ, ಇಲ್ಲವೇ ಮುಂದುವರೆಯುವಂತೆ ಹೇಳಿದ್ದಾರೋ ಗೊತ್ತಿಲ್ಲ. ಆದರೆ, ರಾಜ್ಯದ ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರು ಸೇರಿದಂತೆ ಎಲ್ಲಾ ವರ್ಗದ ಅಭಿವೃದ್ದಿಗೆ ಶ್ರಮಿಸಿದ್ದಾರೆ. ಕಾರಣ ಅವರೇ ಮುಂದುವರೆಯಬೇಕು ಎಂದರು.

# ಟಿವಿಮೇಲೆ ಐ.ಟಿ. ದಾಳಿ

**(3ನೇ ಪುಟದಿಂದ)** ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ದಾಳಿಗಳನ್ನು ಖಂಡಿಸಿದ್ದಾರೆ. ಆದರೆ, ಕ್ರಮಗಳನ್ನು ಸಮರ್ಥಿಸಿಕೊಂಡಿರುವ ಕೇಂದ್ರದ ಸಚಿವ ಅನುರಾಗ್ ಠಾಕೂರ್, ಸಂಸ್ಥೆಗಳು ತಮ್ಮ ಕೆಲಸ ಮಾಡುತ್ತಿವೆ. ಇದರಲ್ಲಿ ಯಾವುದೇ ಮಧ್ಯಪ್ರವೇಶ ಇಲ್ಲ ಎಂದಿದ್ದಾರೆ.

# ನಗರಕ್ಕೆ ಇಂದು ಹೆಚ್.ಕೆ. ಪಾಟೀಲ್




ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರೂ, ಮಾಜಿ ಸಚಿವರೂ, ಹಾಲಿ ಶಾಸಕರೂ ಆಗಿರುವ ಹೆಚ್.ಕೆ. ಪಾಟೀಲ್ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ.

ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಚೌಕಿಪೇಟೆ ಶಾಖೆಯಲ್ಲಿ ನೂತನವಾಗಿ ಸ್ಥಾಪಿಸಿರುವ ಎಟಿಎಂ ಉದ್ಘಾಟನಾ ಸಮಾರಂಭವು ಇಂದು ಸಂಜೆ 4 ಗಂಟೆಗೆ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ಹೆಚ್.ಕೆ .ಪಾಟೀಲ್ ಪಾಲ್ಗೊಳ್ಳಲಿದ್ದಾರೆ.

ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಪಟ್ಟಣ ಸಹಕಾರಿ ಬ್ಯಾಂಕುಗಳ ಪ್ರಚಲಿತ ವಿದ್ಯಾಮಾನ ಹಾಗೂ ಬ್ಯಾಂಕಿನ ಇತರೆ ಯಾವುದೇ ಸಮಸ್ಯೆಗಳ ಕುರಿತಂತೆ ಚರ್ಚೆ ನಡೆಯಲಿದ್ದು, ಜಿಲ್ಲೆಯ ಪಟ್ಟಣ ಸಹಕಾರಿ ಬ್ಯಾಂಕುಗಳ ಆಡಳಿತ ಮಂಡಳಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಪ್ರಧಾನ ವ್ಯವಸ್ಥಾಪಕರು ಚರ್ಚೆಯಲ್ಲಿ ಭಾಗವಹಿಸುವಂತೆ ಕೋಗುಂಡಿ ಬಕ್ಕೇಶಪ್ಪ ಮನವಿ ಮಾಡಿದ್ದಾರೆ.

# ಹೊನ್ನಾಳಿ; ದಿನವಿಡೀ ಸುರಿದ ಮಳೆಯಿಂದಾಗಿ 17 ಮನೆಗಳಿಗೆ ಹಾನಿ



ಹೊನ್ನಾಳಿ, ಜು.22 - ತಾಲ್ಲೂಕಿನಲ್ಲಿ ಸುರಿಯುತ್ತಿರುವ ಹೆಚ್ಚು ಮಳೆಯಿಂದಾಗಿ ಈವರೆಗೂ 17 ಮನೆಗಳಿಗೆ ಹಾನಿ ಸಂಭವಿಸಿರುವುದಾಗಿ ತಹಶೀಲ್ದಾರ್ ಬಸವನ ಗೌಡ ಕೋಟೂರ ತಿಳಿಸಿದ್ದಾರೆ.

ಕಚ್ಚಾ ಮನೆಗಳು 14, ಪಕ್ಕ ಮನೆಗಳು 3 ಹಾನಿಯಿಂದಾಗಿ ಅಂದಾಜು 14 ಲಕ್ಷದ 20 ಸಾವಿರ ರೂಗಳ ನಷ್ಟ ಆಗಿರುವುದಾಗಿ ತಿಳಿಸಿದರು.

ತುಂಗಭದ್ರಾ ನದಿಯ ನೀರಿನ ಮಟ್ಟ ಇಂದು 8 ಮೀ. ಇದ್ದು 12 ಮೀ. ಅಪಾಯ ಮಟ್ಟವಾಗಿದೆ. ದಿನದಿಂದ ದಿನಕ್ಕೆ ನದಿ ಅಪಾಯ ಮಟ್ಟ ಹೆಚ್ಚುತ್ತಿರುವುದನ್ನು ತಹಶೀಲ್ದಾರ್ ಪರಿಶೀಲನೆ ನಡೆಸಿದರು. ನದಿ ಪಾತ್ರದ ಹಳ್ಳಿಗಳಲ್ಲಿನ ಜನರಿಗೆ ಡಂಗೂರ ಹಾಗು ಪ್ರಚಾರದ ಮೂಲಕ ಎಚ್ಚರಿಕೆ ನೀಡಲಾಗಿದೆ.

ಅಗತ್ಯ ಬಿದ್ದರೆ ಮುಂಜಾಗ್ರತೆಗಾಗಿ ಪಟ್ಟಣದ ಅಂಬೇಡ್ಕರ ಭವನವನ್ನು ಗಂಜಿ ಕೇಂದ್ರವನ್ನಾಗಿ ತೆರೆಯಲು ಎಲ್ಲ ಸಿದ್ದತೆಗಳನ್ನು ತಾಲ್ಲೂಕು ಆಡಳಿತ ಹಮ್ಮಿಕೊಂಡಿದೆ ಎಂದು ವಿವರಿಸಿದರು.

# ಬೀದಿ ಬದಿ ವಾಪಾರಸ್ಥರು ಸುಂಕ ನೀಡದಂತೆ ಪಾಲಿಕೆ ಸೂಚನೆ

ದಾವಣಗೆರೆ, ಜು.22 - ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಸ್ಥಳಗಳಲ್ಲಿ ನಿತ್ಯ ಹಾಗೂ ವಾರದ ಸಂತೆಗಳಲ್ಲಿ ಬೀದಿ ಬದಿ ವ್ಯಾಪಾರಸ್ಥರಿಂದ ಸುಂಕ ವಸೂಲಾತಿ ಮಾಡಲು ನೀಡಿದ ಕಾರ್ಯಾದೇಶದ ಅವಧಿ ಮುಕ್ತಾಯವಾಗಿದ್ದು, ಮುಂದಿನ ಹರಾಜು ಪ್ರಕ್ರಿಯೆ ನಡೆಸಿ, ಕಾರ್ಯಾದೇಶ ನೀಡುವವರೆಗೂ ಬೀದಿ ಬದಿ ವ್ಯಾಪಾರಿಗಳು ಸುಂಕ ನೀಡದಂತೆ ಸೂಚನೆ ನೀಡಲಾಗಿದೆ.

ಸುಂಕ ವಸೂಲಾತಿ ಹಕ್ಕಿನ ಬಹಿರಂಗ ಹರಾಜು ಪ್ರಕ್ರಿಯೆ ಕೋವಿಡ್-19 ಮತ್ತು ಇತರೆ ಕಾರಣಗಳಿಂದ ಕೈಗೊಂಡಿರುವುದಿಲ್ಲ. ಹೀಗಾಗಿ ಮಹಾನಗರ ಪಾಲಿಕೆಯಿಂದ ಹರಾಜು ಪ್ರಕ್ರಿಯೆ ನಡೆಸಿ ಕಾರ್ಯಾದೇಶ ನೀಡುವವರೆಗೂ ಸುಂಕವನ್ನು ನೀಡದಂತೆ ಸೂಚನೆ ನೀಡಲಾಗಿದೆ. ಯಾರಾದರೂ ಸುಂಕ ವಸೂಲಾತಿ ಮಾಡುತ್ತಿರುವುದು ಕಂಡು ಬಂದಲ್ಲಿ ಮಹಾನಗರಪಾಲಿಕೆ ಕಚೇರಿಗೆ ದೂರು ಸಲ್ಲಿಸಬಹುದು ಎಂದು ಮಹಾನಗರಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ತಿಳಿಸಿದ್ದಾರೆ.

# ವಿಮಾನ ನಿಲ್ದಾಣಕ್ಕೆ ಕುವೆಂಪು ಹೆಸರಿಡಲು ಆಗ್ರಹ



ದಾವಣಗೆರೆ, ಜು.22- ಶಿವಮೊಗ್ಗದಲ್ಲಿ ನಿರ್ಮಾಣವಾಗುತ್ತಿರುವ ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಅವರ ಹೆಸರು ಇಡುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆಯಿಂದ ನಗರದ ಉಪ ವಿಭಾಗಾಧಿಕಾರಿಗಳಿಗೆ ಇಂದು ಮನವಿ ಸಲ್ಲಿಸಲಾಯಿತು.

ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣಕ್ಕೆ ಈಗಾಗಲೇ ಕಾಮಗಾರಿ ಪ್ರಾರಂಭವಾಗಿದ್ದು, ವಿಶ್ವದಲ್ಲಿರುವ ಪ್ರತಿಯೊಬ್ಬ ಕನ್ನಡಿಗರು ಕುವೆಂಪು ವಿಚಾರಧಾರೆಯನ್ನು ಅನುಸರಿಸುತ್ತಿದ್ದಾರೆ. ಆದ ಕಾರಣ ರಾಷ್ಟ್ರಕವಿ ಕುವೆಂಪುರವರ ಹೆಸರನ್ನು ತಾವುಗಳು ಅನುಮೋದಿಸಿ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಕುವೆಂಪು ವಿಮಾನ ನಿಲ್ದಾಣ ಎಂದು ನಾಮಕರಣ ಮಾಡಬೇಕೆಂದು ಕರವೇ ಆಗ್ರಹಿಸಿದೆ.

ಶಿವಮೊಗ್ಗದ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ಹುಟ್ಟಿ ಬೆಳೆದು ಸಾರ್ಥಕ ಜೀವನ ಮುಗಿಸಿದ ಕುವೆಂಪುರವರ ಸವಿನೆನಪಿಗಾಗಿ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಹೆಸರಿಡುವುದು ಸೂಕ್ತ. ವಿಶ್ವಮಾನವ ಸಂದೇಶ ಸಾರುವ ನಿಟ್ಟಿನಲ್ಲಿ ರಾಷ್ಟ್ರಕವಿ ಕುವೆಂಪು ಹೆಸರನ್ನು ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ನಾಮಕರಣ ಮಾಡುವಂತೆ ವೇದಿಕೆ ಒತ್ತಾಯಿಸಿದೆ.

ಈ ವೇಳೆ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ, ಮಹಿಳಾ ಘಟಕದ ಅಧ್ಯಕ್ಷೆ ಬಸಮ್ಮ, ಶಾಂತಮ್ಮ, ಮಂಜುಳಮ್ಮ, ಡಿ. ಮಲ್ಲಿಕಾರ್ಜುನ್, ಜಿ.ಎಸ್. ಸಂತೋಷ್, ಎಂ.ಡಿ. ರಫೀಕ್, ಗೋಪಾಲ್ ದೇವರಮನೆ, ಖಾದರ್ ಭಾಷಾ, ನಾಗರಾಜ್, ಕರಿಯಪ್ಪ, ಜಬಿವುಲ್ಲಾ ಸೇರಿದಂತೆ ಇತರರು ಇದ್ದರು.

# ಕಸಾಪ ಚುನಾವಣೆ ಪೂರ್ಣಗೊಳಿಸಲು ಒತ್ತಾಯ



ದಾವಣಗೆರೆ,ಜು.22- ಕೋವಿಡ್ ಹಿನ್ನೆಲೆಯಲ್ಲಿ ಮುಂದೂಡಲಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯನ್ನು ತತ್ ಕ್ಷಣವೇ ನಡೆಸುವಂತೆ ಜಿಲ್ಲಾ ಕಸಾಪ ಅಧ್ಯಕ್ಷ ಸ್ಥಾನದ ಚುನಾವಣೆಯ ಅಭ್ಯರ್ಥಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಭೇಟಿ ಮಾಡಿದ ವಾಮದೇವಪ್ಪ ನೇತೃತ್ವದ ನಿಯೋಗವು ಮನವಿ ಸಲ್ಲಿಸಿತು.

ಕೊರೊನಾ ಸೋಂಕು ಕಡಿಮೆಯಾಗಿರುವ ಕಾರಣ ಈಗಾಗಲೇ ಲಾಕ್ ಡೌನ್ ತೆರವು ಗೊಂಡಿರುವುದಲ್ಲದೇ, ಶಾಲಾ-ಕಾಲೇಜುಗಳ ಪರೀಕ್ಷೆಗಳನ್ನು ನಡೆಸಲಾಗಿದೆ. ಒಟ್ಟಿನಲ್ಲಿ ಸಹಜ ಜೀವನದೆಡೆಗೆ ರಾಜ್ಯ ಮರಳುತ್ತಿದೆ. ಈ ಹಿನ್ನೆಲೆಯಲ್ಲಿ ಕಸಾಪಕ್ಕೆ ಚುನಾವಣೆ ನಡೆಸುವಂತೆ ಅವರು ಮನವಿ ಮಾಡಿಕೊಂಡಿದ್ದಾರೆ.

ಕಸಾಪದ ಬಹುತೇಕ ಆಜೀವ ಸದಸ್ಯರು ಲಸಿಕೆ ಹಾಕಿಸಿಕೊಂಡಿದ್ದಾರೆ. ನಾಡು-ನುಡಿ, ನೆಲ-ಜಲ, ಸಾಹಿತ್ಯ, ಕಲೆ, ಸಂಸ್ಕೃತಿಗಳಿಗೆ ಸಂಬಂಧಿಸಿದ ಚಟುವಟಿಕೆಗಳು ನಡೆಯಲು ಅನುಕೂಲವಾಗುವಂತೆ ಪ್ರಜಾಪ್ರಭುತ್ವದ ಅಡಿಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣಾ ಪ್ರಕ್ರಿಯೆಯನ್ನು ಕೊರೊನಾ ನಿಯಮಗಳ ಅಡಿಯಲ್ಲಿಯೇ ತಕ್ಷಣ ಪ್ರಾರಂಭಿಸುವಂತೆ ಮನವಿಯಲ್ಲಿ ಅವರು ಕೇಳಿಕೊಂಡಿದ್ದಾರೆ.

ಜಿಲ್ಲಾ ಕಸಾಪ ನಿಕಟ ಪೂರ್ವ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ, ಕಾರ್ಯ ದರ್ಶಿ ದಿಳ್ಯಪ್ಪ, ಜಿ.ಆರ್.ಷಣ್ಮುಖಪ್ಪ, ಬಿ.ಎಂ.ಮುರಿಗೆಯ್ಯ ಕುರ್ಕಿ ಮುಂತಾದವರು ನಿಯೋಗದಲ್ಲಿದ್ದರು.

